


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119



Volume : 06 Issue : 300 Friday 09-08-2024 E-mail : maruti.b.hosamani76@gmail.com Page: 4 Price : Rs. 1/-


# ವಕ್ಫ್ ಮಸೂದೆ ಜಟಾಪಟಿ



**ನವದೆಹಲಿ :** ವಕ್ಫ್ ಮಂಡಳಿಗಳಲ್ಲಿ ಮಹಿಳೆಯರನ್ನು ಕಡ್ಡಾಯವಾಗಿ ಸೇರಿಸುವುದು ಸೇ-ರಿದಂತೆ ಹೊಣೆಗಾರಿಕೆ ಮತ್ತು ಪಾರದರ್ಶಕತೆ ಹೆಚ್ಚಿಸುವ ಗುರಿ ಹೊಂದಿರುವ ವಿವಾದಾತ್ಮಕ ವಕ್ಫ್ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿಂದು ಕೇಂದ್ರ ಸರ್ಕಾರ ಮಂಡಿಸಿದ್ದು ಆಡಳಿತ ಮತ್ತು ಪ್ರತಿ ಪಕ್ಷಗಳ ವಾಕ್ಸಮರಕ್ಕೆ ವೇದಿಕೆಯಾಗಿದೆ.

ಈ ಮಸೂದೆಯನ್ನು ಸಂಸತ್ತಿನ ಸ್ಥಾಯಿ ಸಮಿತಿಗೆ ಹೆಚ್ಚಿನ ಸಮಾಲೋಚನೆಗಾಗಿ ಕಳುಹಿಸುವಂತೆ ಒತ್ತಾಯಿಸಿ ವಿರೋಧ ಪಕ್ಷಗಳು ಸದನದಲ್ಲಿ ಬಾರಿ ಗದ್ದಲ ಸೃಷ್ಟಿ ಮಾಡಿದ್ದು ಆಡಳಿತ ಮತ್ತು ಪ್ರತಿ ಪಕ್ಷಗಳ ಸದಸ್ಯರ ನಡುವೆ ವಾಕ್ಸಮರಕ್ಕೆ ವೇದಿಕೆಯಾದ ಘಟನೆ ನಡೆದಿದೆ. ಅಲ್ಪ ಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಕ್ಫ್ತಿ-ದ್ದು ಪಡಿ ಮಸೂದೆ ಮಂಡಿಸಿ ದೇಶದ ವಕ್ಫ್ ಮಂಡಳಿಗಳಲ್ಲಿ ಪಾರದರ್ಶಕತೆ ತರಲು ಈ ಮಸೂದೆ ಮಂಡಿಸಲಾಗಿದೆ. ಇದರಿಂದ ವಕ್ಫ್ ಮಂಡಳಿಗಳಲ್ಲಿ ಅಧಿಕಾರ ಸುಗಮವಾಲಿದೆ ಎಂದು ಹೇಳಿದರು.ಈ ಹಂತದಲ್ಲಿ ಕಾಂಗ್ರೆಸ್ ಸೇರಿದಂತೆ ಇಂಡಿಯಾ ಮೈತ್ರಿಕೂಟದ ಸದಸ್ಯರು ತೀವ್ರ ಆಕ್ಷೇಪಿಸಿದರು. ಮದ್ಯ ಪ್ರವೇಶಿಸಿದ ಸಭಾಧ್ಯಕ್ಷ ಓಂ ಬಿರ್ಲಾ ಅವರು ಸದಸ್ಯರು ನೋಟೀಸ್ ನೀಡದೆ ಹಲವು ಮಂದಿ ಏಕಕಾಲದಲ್ಲಿ ಮಾತನಾಡಲು ಮುಂದಾದರೆ ಸದನ ನಡೆಸುವುದಾದರು ಹೇಗೆ ಎಂದು ಪ್ರತಿಪಕ್ಷಗಳ ಸದಸ್ಯರ ನಡೆಯನ್ನು ತರಾಟೆಗೆ ತೆಗೆದುಕೊಂಡರು.ಕಾಂಗ್ರೆಸ್ ಸಂಸದ ಕೆಸಿ ವೇಣುಗೋಪಾಲ್ ವಕ್ಫ್ ತಿದ್ದುಪಡಿ ಮಸೂದೆ, 2024 ಅನ್ನು ವಿರೋಧಿಸಿ, ಅಲ್ಪ ಸಂಖ್ಯಾತ ಸಮುದಾಯವನ್ನು ಹತ್ತಿಕ್ಕುವ ಕೆಲಸ ಮಾಡಲಾಗಿತ್ತಿದೆ ಎಂದು ಹರಿಹಾಯ್ದರು. ಜೊತೆಗೆ "ಈ ಮಸೂದೆಯು ಸಂವಿಧಾನದ ಮೇಲಿನ ಮೂಲಭೂತ ದಾಳಿಯಾಗಿದೆ. ಈ ಮಸೂದೆಯ ಮೂಲಕ ಅವರು ಮುಸ್ಲಿಮೇತರರೂ ವಕ್ಫ್ ಆಡಳಿತ ಮಂಡಳಿಯಸದಸ್ಯರಾಗಬೇಕೆಂಬ ನಿಬಂಧನೆ ಹಾಕುತ್ತಿದ್ದಾರೆ. ಇದು ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ನೇರ ದಾಳಿಯಾಗಿದೆ.. ಮುಂದೆ ನೀವು ಕ್ರಿಶ್ಚಿಯನ್ನರ ಕಡೆಗೆ ಹೋಗುತ್ತೀರಿ, ನಂತರ ಜೈನರು ? ಭಾರತ ವಿಭಜಕ ರಾಜ-ಕೀಯ ಮಾಡುವುದಕ್ಕೆ ಅವಕಾಶ ಮಾಡಿಕೊಡಲಿದೆ ಎಂದು ಹೇಳಿದರು.ನಾವು ಹಿಂದೂಗಳು ಆದರೆ ಅದೇ ಸಮಯದಲ್ಲಿ, ನಾವು ಇತರ ಧರ್ಮಗಳ ನಂಬಿಕೆಯನ್ನು ಗೌರವಿಸಬೇಕಾಗಿದೆ. ಈ ಮಸೂದೆಯು ಮಹಾರಾಷ್ಟ್ರ, ಹ-ರಿಯಾಣಚುನಾವಣೆಯನ್ನುಮುಂದಿಟ್ಟುಕೊಂಡುತಿದ್ದುಪಡಿಮಸೂದೆ ಮಂಡಿಸಲಾಗಿದೆ.ಲೋಕಸಭೆ ಚುನಾವಣೆಯಲ್ಲಿ ದೇಶದ ಜನರು ಬಹುಮತ ನೀಡದೆ ಪಾಠ ಕಲಿಸಿದ್ದಾರೆ.ಆದರೂ ಈ ರೀತಿಯ ಮಸೂದೆಗಳನ್ನುತರುವಮೂಲಕ ಒಕ್ಕೂಟವ್ಯವಸ್ಥೆಯಮೇಲಿನದಾಳಿ ಮಾಡುವುದು ಖಂಡನಾರ್ಹ ಎಂದರು

ಡಿಎಂಕೆ ಸಂಸದೆ ಕನಿಮೊಳಿ ಅವರು, ವಕ್ಫ್ ತಿದ್ದು ಪಡಿ ಮಸೂದೆ "ಅಲ್ಪಸಂಖ್ಯಾತರು ತಮ್ಮ ಸಂಸ್ಥೆಗಳನ್ನು ನಿರ್ವಹಿಸಲು ವ್ಯವಹರಿಸುವ30ನೇವಿಧಿಯನೇರ ಉಲ್ಲಂಘನೆಯಾಗಿದೆ.ಈಮಸೂದೆ ನಿರ್ದಿಷ್ಟಧಾರ್ಮಿಕಗುಂಪನ್ನುಗು-ರಿಯಾಗಿಸಿ ದಾಳಿ ನಡೆಸಲಾಗುತ್ತಿದೆ ಇದನ್ನು ಯಾವುದೇ ಕಾರಣಕ್ಕೂ ಸಹಿಸಿಕೊಳ್ಳಲು ಸಾದ್ಯವಿಲ್ಲ ಎಂದು ಕೇಂದ್ರ ಸರ್ಕಾರದ ಮೇಲೆ ನೇರ ವಾಗ್ದಾಳಿ ನಡೆಸಿದರು.

**ಪಾರದರ್ಶಕತೆ ತರಲು ಕ್ರಮ**

ವಕ್ಫ್ ತಿದ್ದುಪಡಿ ಮಸೂದೆ ವಕ್ಫ್ ಮಂಡಳಿ ತಿದ್ದುಪಡಿ ಮಸೂದೆ ಪಾರದರ್ಶಕತೆ ತರಲು ಸಹಕಾರಿ ಎಂದು ಕೇಂದ್ರ ಸಚಿವ ರಾಜೀವ್ ರಂಜನ್ ಹೇಳಿದ್ದಾರೆ

ಈ ಮಸೂದೆ ಮುಸ್ಲಿಮರ ವಿರುದ್ಧ ಅಲ್ಲ, ಪಾರದರ್ಶಕತೆ ತರಲು ಈ ಕಾನೂನನ್ನು ಮಾಡಲಾಗುತ್ತಿದೆ? ಪ್ರತಿಪಕ್ಷಗಳು ಇದನ್ನು ದೇವಾಲಯಗಳೊಂದಿಗೆ ಹೋಲಿಸುತ್ತಿವೆ. , ಅವರು ಮುಖ್ಯ ವಿಷಯದಿಂದ ಬೇರೆಡೆಗೆ ತಿರುಗುತ್ತಿದ್ದಾರೆಎಂದುತಿರುಗೇಟು ನೀಡಿದ್ದಾರೆ.

ಕೆಸಿ ವೇಣುಗೋಪಾಲ್ ಅವರು ಸಾವಿರಾರು ಸಿಖ್ಖರನ್ನು ಹೇಗೆ ಕೊಂದರು ಎಂಬುದನ್ನು ವಿವರಿಸಬೇಕು? ಇಂದಿರಾ ಗಾಂಧಿಯನ್ನು ಕೊಂದ ಟ್ಯಾಕ್ಸಿ ಡ್ರೈವರ್ ಈಗ ಅಲ್ಪಸಂಖ್ಯಾತರ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ತಿರುಗೇಟು ನೀಡಿದ್ದಾರೆ.

# ಉತ್ತಮ ಆರೋಗ್ಯವೇ ನಮ್ಮ ಗುರಿ, ಡೆಂಗ್ಯೂ ರೋಗ ತಡೆಗೆ, ಮುಂಜಾಗ್ರತೆ ಅರಿವು



**ಬಾಗಲಕೋಟೆ :** ಬಾಗಲಕೋಟೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟೆ ಶಂಕ್ರೆಪ್ಪ ಸಕ್ರಿ ಪ್ರೌಢಶಾಲೆ ನವನಗರ ಸಹಯೋಗದಲ್ಲಿ, "ಈಡೀಜ್ ಇಜಿಪ್ತೆ" ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆ ದಿನ ಆರೋಗ್ಯ ಜಾಗೃತಿಯಲ್ಲಿ ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ, ಎಸ್.ಎಸ್ ಅಂಗಡಿಯವರು, ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಮುಂಜಾಗ್ರತೆ ಕ್ರಮಗಳ ಪಾಲನೆ ಆಸ್ಪತ್ರೆಗೆ ಅಲೆದಾಟ ತಪ್ಪಿಸಿ ಕೊಳ್ಳಿ"ಕಡಿತ ಚಿಕ್ಕದು ಅಪಾಯ ದೊಡ್ಡದು" ಘೋಷಣೆಗಳೊಂದಿಗೆ, ಡೆ-ಂಗ್ಯೂ ಸೊಳ್ಳೆ ಸ್ವಚ್ಚ ನೀರಿನಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ ನೀರಿನ ಸಂಗ್ರಹಗಳ ಮೇಲೆ ತಪ್ಪದೇ ಮುಚ್ಚಳಿಕೆ ಹಾಕಬೇಕು ಮುಂಜಾಗ್ರತೆ ಕ್ರಮಗಳ ಪಾಲಿಸಿ ಆಸ್ಪತ್ರೆಗೆ ಅಲೆದಾಟ ತಪ್ಪಿಸಿ ಕೊಳ್ಳಿ ಎಲ್ಲರೂ ಡೆಂಗ್ಯೂ ತಡೆಗೆ ಸಹಕರಿಸ ಬೇಕು ಅಗತ್ಯ ಎಂದರು. ನೀರಿನ ಸಂಗ್ರಹಗಳ ಮೇಲೆ ತಪ್ಪದೇ ಮುಚ್ಚಳಿಕೆ ಹಾಕಬೇಕು, ಸೊಳ್ಳೆ ಪರದೆ ನಿರೋಧಕ ಬಳಸ ಬೇಕು. ಸುತ್ತ ಮುತ್ತ ಪರಿಸರ ಸ್ವಚ್ಛತೆ ಕಾಪಾಡಿ ಕೊಳ್ಳಬೇಕು, ಅನುಪಯುಕ್ತ ವಸ್ತು ಕಸ ವಿಲೇವಾರಿ ಮಾಡಬೇಕು.

ವಿವಿಧ ಸಾಂಕ್ರಾಮಿಕ ರೋಗಗಳ ಬಗ್ಗೆ ಮಾಹಿತಿ ನೀಡಿದರು. ಹಿರಿಯ ಆರೋಗ್ಯನಿರೀಕ್ಷಣಾಧಿಕಾರಿ,ಬಿ ಎಚ್ ಗುಗ್ಯಾಳ, ಶಂಕ್ರೆಪ್ಪ ಸಕ್ರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯ, ಎಮ್ ಎಸ್ ಶೆಟವಾಜಿ, ಗುರು ವೃಂದದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಬಣಗಾರ ನಾಲಿಕ ಸಮಾಜ ದವರಿಂದ ಶರಣ ಶಂಕರ ದಾಶಿಮಯ್ಯನವರ ಜಯಂತಿ ಆಚರಣೆ



**ಕಂದಗಲ್ಲ :** ಸಮೀಪದ ನವಲೆ ಗ್ರಾಮದಲ್ಲಿ ಶರಣ ಶಂಕರ ದಾಸಿಮಯ್ಯನವರ ಜಯಂತಿಯನ್ನು ಬಣಗಾರ ನಾಗಲಿಕ ಸಮಾಜ ಬಾಂಧವರು ಅತ್ಯಂತ ವಿಜೃಂಭಣೆಯಿಂದ ಆಚರಿಸಿದರು.

ಬಸವಾದಿ ಶರಣ-ರ ಸಮಕಾಲಿನವರಾಗಿದ್ದರು ವಚನಗಳಿಂದ, ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ ಉತ್ತಮವಾದ ಸಮಾಜದ ಅಭಿವೃದ್ಧಿಗೆ ಶ್ರಮಿಸಿದವರು ಶರಣ ಶಂಕರದಾಶಿಮಯ್ಯನವರು ಎಂದು ಸಮಾಜದ ಮುಖಂಡ ಸುರುಪುರದ ವಸಂತ್ ಕುಮಾರ್ ಬಣಗಾರ ಹೇಳಿದರು. ಸುಕ್ಷೇತ್ರ ಶ್ರೀ ನವಲೆ ಶಂಕರಲಿಂಗ ದೇವಸ್ಥಾನ ಜೀರ್ಣೋದ್ಧಾರ ಸಮಿತಿಯು ಶ್ರಾವಣ ಮಾಸದ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಶ್ರೀ ಜಡೆಯ ಶಂಕರಲಿಂಗ ದೇವಸ್ಥಾನದಲ್ಲಿ ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರು ಹೆಚ್ಚಿನ ರೀತಿಯಲ್ಲಿ ಸೇರಿ ಸಾಂಸ್ಕೃತಿಕ ಸಾಹಿತ್ಯಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶಂಕರ್ ಲಿಂಗ ದೇವರ ಕೃಪಗೆ ಪಾತ್ರರಾಗಬೇಕು, ಎಂದರು.

ನೂಲಿಗೆ ಬಣ್ಣ ಹಾಕುವವರು, ಬಣಗಾರರು ಸೂಜಿ ಕಾಯಕದಿಂದ ಪ್ರಸಿದ್ಧಿಯಾದವರು ಸಿಂಪಿಗರು ಎಂದು ಆನಂದ್ ಬಾರಿಗಿಡ ಹೇಳಿದರು.

ಶ್ರಾವಣ ಮಾಸದ ಪ್ರಯುಕ್ತ ಪ್ರತಿದಿನ ಬೆಳಗ್ಗೆ 8:00ಗೆ ಅಭಿಷೇಕ, ಅನ್ನದಾಸೋಹ ನೆಡೆಯಲಿದ್ದು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದರು.

ಕಾರ್ಯ ಕ್ರಮದಲ್ಲಿ,ಶೇಖರ ನಾಗಲಿಕರ. ಕಿರಣ ಕಂದಗಲ್ಲ . ಮಲ್ಲಿಕಾರ್ಜುನ ಮಜ್ಜಿಗೆ, ಸಂತೋಷ್ ಸರಾಫ, ಅಕ್ಕ ಮಹಾದೇವಿ ಗಣಮುಖಿ, ಸೂಗಪ್ಪ ಕಲಿಕೇರಿ,ಶ್ರೀಧರ್ ಮಸ್ಕಿ ,ರವಿಶಂಕರ್ ಕಂದಗಲ್, ಶಶಿರೇಖಾ,ಶಕುಂತಲಾ ಸರಾಫ್, ರಮೇಶ್ ಮೇಣಜಿಗಿ,

ಸಾಗರ್, ಬಸವ ಸೃಷ್ಟಿ ಭಾ-ಗಿಯಾಗಿದ್ದರು.

ಇಲಕಲ್ಲನ ಜಗದೀಶ್ ಸರಾಫ, ಹಾಗೂ

ಕಂದಗಲ್ಲದ ಪತ್ರಕರ್ತ ವೀರೇಶ ಶಿಂಪಿ ಸಂಪೂರ್ಣ ಕಾರ್ಯಕ್ರಮ ನೆಡೆಸಿಕೊಟ್ಟರು.

# ಜಿಲ್ಲಾ ಉಸ್ತುವಾರಿ ಸಚಿವ ಆರ್ ಬಿ ತಿಮ್ಮಾಪುರ ರವರಿಂದ ರಬಕವಿ, ಬನಹಟ್ಟಿ, ತೇರದಾಳ ತಾಲೂಕಾ ಪ್ರಗತಿ ಪರಿಶೀಲನಾ ಸಭೆ



**ಬಾಗಲಕೋಟೆ :** ಜಿಲ್ಲೆಯ ಎಲ್ಲ ಇಲಾಖೆಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ರಬಕವಿ - ಬನಹಟ್ಟಿ ಹಾಗೂ ತೇರದಾಳ್ ತಾಲೂಕಿನ ಪ್ರಗತಿ ಪರಿಶೀಲನಾ ಸಭೆಯನ್ನು ಜಿಲ್ಲಾ ಉಸ್ತುವಾರಿ ಹಾಗೂ ಅಬಕಾರಿ ಸಚಿವ ಆರ್ ಬಿ ತಿಮ್ಮಾಪುರ್ ಅಧ್ಯಕ್ಷತೆಯಲ್ಲಿ ಜರುಗಿತು. ಜಿಲ್ಲೆಯ ರಬಕವಿ ಬನಹಟ್ಟಿ ನಗರಸಭೆ ಸಭಾಭವನದಲ್ಲಿ ,ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕರು ವಿಧಾನ ಪರಿಷತ್, ಸದಸ್ಯರಾದ ಮಾಜಿ ಸಚಿವೆ ಶ್ರೀಮತಿ ಉಮಾಶ್ರೀ ಅವರು, ಜಿಲ್ಲಾಧಿಕಾರಿಗಳಾದ ಜಾನಕಿ ಮೇಡಂ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಅಧಿಕಾರಿಗಳು ಭಾಗವಹಿಸಿದ್ದರು ತಾಲೂಕ ಸಮಸ್ಯೆಗಳು, ಪ್ರಗತಿ ಪರಿಶೀಲನೆ ವಿವಿಧ ಮೂಲಭೂತ ಸೌಲಭ್ಯ, ಆರೋಗ್ಯ ,ಶಿಕ್ಷಣ , ಪಶುಸಂಗೋಪನೆ , ಮಹಿಳಾ ಮತ್ತು ಮಕ್ಕಳ , ಕಲ್ಯಾಣ ಇಲಾಖೆ ಇನ್ನೂ ಹಲವಾರು ಇಲಾಖೆಗಳ ಜಿಲ್ಲಾ ಮಟ್ಟದ ಹಾಗೂ ತಾಲೂಕ ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿಯನ್ನು ಆಲಿಸಿದರು.

# ಯಡ್ರಾಮಿ ಪಟ್ಟಣದಲ್ಲಿ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಜೈ ಕರ್ನಾಟಕ ರಕ್ಷಣಾ ವೇದಿಕೆಯಿಂದ ಮನವಿ



**ಯಡ್ರಾಮಿ :** ತಾಲೂಕಿನ ಅಭಿವೃದ್ಧಿ ಪರ ದೃಷ್ಟಿಯಿಂದ ವಿವಿಧ ಬೇಡಿಕೆಗಳನ್ನು ಕೈಗೊಳ್ಳಲು ಆಗ್ರಹಿಸಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಕಾರ್ಯ ಮತ್ತು ಪಾಲನ ಉಪ ವಿಭಾಗ ಅಧಿಕಾರಿಗಳಿಗೆ ಜೈ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಮನವಿ ಪತ್ರ ಸಲ್ಲಿಸಲಾಯಿತು ಈ ಸಂದರ್ಭದಲ್ಲಿ ಜೈ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕ ಅಧ್ಯಕ್ಷರಾದ ಅಮರನಾಥ್ ಸಾಹೂ ಕುಳಗೇರಿ ಅವರು ಅಧಿಕಾರಿಗಳನ್ನು ಉದ್ದೇಶಿಸಿ

ಮಾತನಾಡಿದರು ಅಧಿಕಾರಿಗಳೇ ವ್ಯವಸ್ಥೆಯನ್ನು ಸರಿಪಡಿಸಿ ಇಲ್ಲ ಕುರ್ಚಿ ಖಾಲಿ ಮಾಡಿ ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಎಂದು ಈ ಸಂದರ್ಭದಲ್ಲಿ ಅವ್ಯವಸ್ಥೆ ವಿರುದ್ಧ ಧಿಕ್ಕಾರ ಕೂಗಿದರು ಹಾಗೂ ಯಡ್ರಾಮಿ ತಾಲೂಕಿನ ವ್ಯಾಪ್ತಿಯ ಪ್ರತಿ ಹಳ್ಳಿ ಹಳ್ಳಿಯಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತಿದ್ದು ಕೂಡಲೇ ಸರಿಪಡಿಸುವಂತೆ ತಾಕಿತು ಮಾಡಿದರು ಅಷ್ಟೇ ಅಲ್ಲದೆ ರೈತರ ಪಂಪ್ಸೆಟ್ಟಗಳಿಗೆ ವಿದ್ಯುತ್ ನೀಡಲು ಲೈನ್ ಮ್ಯಾನ್ ಗಳು ಹಣ ಸುಲಿಗೆ ಮಾಡುತ್ತಿರುವುದು ಕಂಡುಬಂದಿದ್ದು ಇದನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಆಗ್ರಹಿಸಿದರು ಅಷ್ಟೇ ಅಲ್ಲದೆ ತಮ್ಮ ಇಲಾಖೆಯ ಸಿಬ್ಬಂದಿಗಳು ಕರ್ತವ್ಯ ಪಾಲನೆಯಲ್ಲಿ ಕರ್ತವ್ಯ ಲೋಪವೇಸಿಗುತ್ತಿರುವುದು ಕಂಡುಬಂದಿದ್ದು ಇದು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ತಿಳಿ ಹೇಳಿದರು ಹಾಗೂ ತಮ್ಮ ಇಲಾಖೆಯಲ್ಲಿ ಖಾಸಗಿ ವ್ಯಕ್ತಿಗಳಿಗೆ ತಮ್ಮ ಇಲಾಖೆಯ ಸಿಬ್ಬಂದಿಗಳು ಬಳಸುತ್ತಿರುವುದು ಕಂಡುಬಂದಿದ್ದು ಕಾನುನಾತ್ಮಕವಾಗಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಆಗ್ರಹಿಸಿದ್ದರು ಒಂದು ವೇಳೆ ನಿರ್ಲಕ್ಷ ವಹಿಸಿದರೆ

ಇದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಲೋಕಾಯುಕ್ತ ಇಲಾಖೆಗೆ ದೂರು ಸಲ್ಲಿಸಲಾಗುವುದು ಎಂದು ಈ ಸಂದರ್ಭದಲ್ಲಿ ಮಾತನಾಡಿದರು ಅದೇ ರೀತಿಯಾಗಿ ಹೊಸ ಬಡಾವಣೆಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಿಕೊಡಬೇಕು ಅದೇ ರೀತಿಯಾಗಿ ಪ್ರತಿ ಟಿಸಿಗಳಿಗೂ ರಕ್ಷಾ ಕವಚ ಅಳವಡಿಸಬೇಕು ಒಂದು ವೇಳೆ ಏನಾದರೂ ಅನಾಹುತವಾದರೆ ಅಥವಾ ಪ್ರಾಣ ಹಾನಿಯಾದರೆ ತಮ್ಮ ಇಲಾಖೆಯ ಅಧಿಕಾರಿಯನ್ನು ನೇರ ಹೊಣೆಗಾರನಾಗಿ ಮಾಡಿ ದೂರು ಸಲ್ಲಿಸಿ ಅಮಾನತು ಆಗುವವರೆಗೂ ಹೋರಾಟ ಮಾಡಲಾಗುವುದು ಎಂದು ತಾಲೂಕ ಅಧ್ಯಕ್ಷರಾದ ಅಮರನಾಥ್ ಸಾಹು ಕುಳಗೇರಿ ಅವರು ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಯಡ್ರಾಮಿ ಪೊಲೀಸ್ ಠಾಣಾ ಆರಕ್ಷಕ ಅಧಿಕಾರಿ ವಿಶ್ವನಾಥ್ ಮುದರೆಡ್ಡಿ ಅವರು ಭಾಗವಹಿಸಿದ್ದರು ಹಾಗೂ ಶಫಿಉಲ್ಲಾ ದಖನಿ ಈರಣ್ಣ ಬಜಂತ್ರಿ ಲಾಳೆ ಸಾಬ್ ಮನಿಯರ್ ಹಣಮಂತ್ ಗುತ್ತೇದಾರ್ ಜಗದೀಶ್ ದ್ಯಾಮ ಹಣಮಂತರಾಯ ಕಡಕೋಳ ಸಲೀಂ ಕಡಕೋಳ ಅಕ್ಷಯ್ ಕುಮಾರ್ ಯಡ್ರಾಮಿ ನಾಗು ದೊಡ್ಡಮನಿ ಹಾಗೂ ಸ್ಥಳೀಯ ನಾಗರಿಕರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

# ಹೋಬಳಿ ಮಟ್ಟಕ್ಕೆ ಆಯ್ಕೆಯಾದ ಢವಳಗಿ ಸರಕಾರಿ ಕನ್ನಡ ಮಾದರಿಯ ಪ್ರಾಥಮಿಕ ಶಾಲೆಯ ವಿಧ್ಯಾರ್ಥಿಗಳು



**ಮುದ್ದೇಬಿಹಾಳ :** ತಾಲೂಕಿನ ಢವಳಗಿ ಗ್ರಾಮದ ಬಸವ ಬಾಲ ಭಾರತಿ ಶಾಲೆಯಲ್ಲಿ ಅಗಸ್ಟ 6ರಂದು ನಡೆದ ಢವಳಗಿ ಕ್ಲಸ್ಟರ್ ಮಟ್ಟದ ಕ್ರೀಡಾಕೂಟದಲ್ಲಿ ಢವಳಗಿ ಗ್ರಾಮದ ಸರಕಾರಿ ಕನ್ನಡ ಮಾದರಿಯ ಪ್ರಾಥಮಿಕ ಶಾಲೆಯ ವಿಧ್ಯಾರ್ಥಿಗಳು ಬಾಲಕರ ವಿಭಾಗದಲ್ಲಿ ಗುಂಪು ಆಟಗಳಾದ 4100ರೀಲೆ ಓಟ, ಖೋಖೋ,ಕಬಡ್ಡಿ, ವ್ಹಾಲಿಬಾಲ ಆಟದಲ್ಲಿ ಪ್ರಥಮ ಹಾಗೂ ವ್ಯಯಕ್ತಿಕ ಆಟದಲ್ಲಿ 200 ಮೀಟರ್ ಓಟದಲ್ಲಿ ಪ್ರಥಮ ಮತ್ತು ದ್ವಿತಿಯ, 100 ಓಟದಲ್ಲಿ ತೃತೀಯ,600 ಮೀಟರ್ ಓಟದಲ್ಲಿ ದ್ವಿತಿಯ ಮತ್ತು ತೃತೀಯ, ಹಾಗೂ ಗುಂಡು ಎಸೆತದಲ್ಲಿ ಪ್ರಥಮ ಮತ್ತು ತೃತೀಯ, ಚಕ್ರ ಎಸೆತದಲ್ಲಿ ಪ್ರಥಮ ಮತ್ತು ತೃತೀಯ ಸ್ಥಾನವನ್ನು ಬಾಲಕರ ವಿಭಾಗದಲ್ಲಿ ಪಡೆದರೆ,ಬಾಲಕಿಯರ ವಿಭಾಗದಲ್ಲಿ ಕೂಡಾ 4100 ರೀಲೆ,ಖೋಖೋ, ಕಬಡ್ಡಿ ಆಟದಲ್ಲಿ ಪ್ರಥಮ ಸ್ಥಾನ ಪಡೆದರೆ ವ್ಯಯಕ್ತಿಕ ಆಟದಲ್ಲೂ 100 ಮೀಟರ್ ಓಟದಲ್ಲಿ ಪ್ರಥಮ ಮತ್ತು ದ್ವಿತಿಯ, 200 ಮೀಟರ್ ಓಟದಲ್ಲಿ ದ್ವಿತಿಯ, 400 ಮೀಟರ್ ಓಟದಲ್ಲಿ ಪ್ರಥಮ, 600 ಮೀಟರ್ ಓಟದಲ್ಲಿ ಪ್ರಥಮ ಮತ್ತು ದ್ವಿತಿಯ ಹಾಗೂ ಗುಂಡು ಎಸೆತದಲ್ಲಿ ತೃತೀಯ ಹಾಗೂ ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನ ಪಡೆದು ಮುಂದೆ ನಡೆಯುವ ಹೋಬಳಿ ಮಟ್ಟದ ಸ್ಪರ್ಧೆಗೆ ಆಯ್ಕೆ ಆಗಿದ್ದಾರೆ.

ಶಾಲೆಗೆ ಕೀರ್ತಿ ತಂದ ಮಕ್ಕಳ ಜೊತೆಗೆ ಇವರ ಮಾರ್ಗದರ್ಶನ ನೀಡಿದ ದೈಹಿಕ ಶಿಕ್ಷಕಿಯಾದ ಶ್ರೀಮತಿ ಪಾರ್ವತಿ ಪಿ ಇವರನ್ನು ಮುಖ್ಯ ಗುರುಗಳಾದ ಬಿ ಎಸ್ ಶೇಖಣ್ಣವರ ಅವರು ಸೇರಿದಂತೆ ಶಾಲೆಯ ಎಲ್ಲ ಸಿಬ್ಬಂದಿ ವರ್ಗದವರು ಅಭಿನಂದಿಸಿದರು.

# ಹೈಟಕ್ ಹಾರ್ವೆಸ್ಟರ್ ಹಬ್‌ಗಾಗಿ ರೈತರಿಂದ ಅರ್ಜಿ ಆಹ್ವಾನ

**ಜಮಖಂಡಿ :** ರಬಕವಿ–ಬನಹಟ್ಟಿ ಮತ್ತು ಜಮಖಂಡಿ ತಾಲೂಕಿನ ರೈತ ಬಾಂಧವರು ಸನ್ 2024–25ನೇ ಸಾಲಿನಲ್ಲಿ ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ ಯೋಜನೆಯಡಿ ಹೈಟಕ್ ಹಾರ್ವೆಸ್ಟರ್ ಹಬ್‌ಗಳನ್ನು ಬೆಳೆಯ ವಿಧ ಮತ್ತು ಕಟಾವು ಅವಧಿಯ ಆಧಾರದ ಮೇಲೆ ಕಾರಿಡಾರ ಮಾದರಿಯಲ್ಲಿ ಅನುಷ್ಠಾನ ಮಾಡಲು ಉದ್ದೇಶಿಸಲಾಗಿದೆ. ವೈಯಕ್ತಿಕ 'ರೈತರು ಹಾಗೂ ನೊಂದಾಯಿತ ಸಂಘ ಸಂಸ್ಥೆಗಳಿಂದ ಹೈಟೆಕ್ ಹಾರ್ವೆಸ್ಟರ್ ಹಬ್ ನಿರ್ಮಾಣಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿದಾರರು ಹಬ್‌ಅರ್ಜಿ ನಮೂನೆಯಲ್ಲಿ ನೋಂದಾಯಿಸಿದ ಸಂಸ್ಥೆ ಪ್ರಮಾಣ ಪತ್ರ, ಪಹಣಿ, ಗುರುತಿನ ಪತ್ರ, ಬ್ಯಾಂಕ ಖಾತೆ ಸಂಖ್ಯೆ, 100 ರೂಪಾಯಿಯ ಛಾಪಾ ಕಾಗದದ ಮೇಲೆ ಹಬ್‌ಅನ್ನು ಪರಭಾರೆ ಮಡುವುದಿಲ್ಲವೆಂದು ಮುಚ್ಚಳಿಕೆ ಪತ್ರ, 2 ವರ್ಷಗಳ ಲೆಕ್ಕ ಪರಿಶೋಧನಾ ಪತ್ರ, ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಕಟಾವಿಗೆ ಮಾಡಿಕೊಂಡ ಲಿಖಿತ ಒಪ್ಪಂದ ಪ್ರಮಾಣಪತ್ರ ಹಾಗೂ ಸಹಾಯಧನದ ಸಂಬಂಧಿಸಿದ ತಾತ್ವಿಕ ಸಾಲ ಮಂಜೂರಾತಿ ಪತ್ರವನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳಲ್ಲಿ ಅಥವಾ ತಾಲೂಕಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು.

ಕೃಷಿ ಯಂತ್ರದಾರೆ ಕೇಂದ್ರಗಳ ಸಹಾಯಕ ಸಂಘಗಳ ನಿಬಂಧನೆಯಂತೆ ಕಂಪನಿ ಕಾಯ್ದೆಯಡಿ ನೊಂದಾಯಿಸಿದ ಸಂಘ ಸಂಸ್ಥೆಗಳು ಮಾತ್ರ ಅರ್ಹತೆಯನ್ನು ಹೊಂದಿರುತ್ತವೆ. ಅರ್ಜಿ ಸಲ್ಲಿಸಲು ಆಗಸ್ಟ್ 14 ರಂದು ಕೊನೆ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಬೇಕೆಂದು ಸಹಾಯಕ ಕೃಷಿ ನಿರ್ದೇಶಕ ಎಸ್.ಬಿ.ಪಟ್ಟಿಹಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವೃಂದ, ನೇಮಕಾತಿ ಬದಲಾವಣೆಗೆ ಶಿಕ್ಷಕರ ಆಗ್ರಹ

**ರಬಕವಿ–ಬನಹಟ್ಟಿ :** ರಾಜ್ಯ ಸರ್ಕಾರ ಜಾರಿ ಮಾಡಿದ ವೃಂದ ಮತ್ತು ನೇಮಕಾತಿ ನಿಯಮವನ್ನು ರದ್ದುಗೊಳಿಸುವುದರ ಮೂಲಕ ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ 1,88,532 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನ್ಯಾಯವನ್ನು ಒದಗಿಸಿಕೊಡಬೇಕು ಎಂದು ರಬಕವಿ ಬನಹಟ್ಟಿ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅರ್ಜುನ ಕಾಖಂಡಕಿ ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.



ಶುಕ್ರವಾರ ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ಸಿ. ಮತ್ತು ಆರ್. ನಿಯಮವನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಮನವಿ ಸಲ್ಲಿಸಿ ಮಾತನಾಡಿದರು. ಸಿ ಮತ್ತು ಆರ್ ನಿಯಮದಿಂದಾಗಿ 2016 ಕ್ಕಿಂತ ನಂತರ ನೇಮಕಾತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವರ್ಗಾವಣೆ, ಬಡ್ತಿ, ಕಾಲಮಿತಿ ವೇತನ ಬಡ್ತಿ, ಸ್ವಯಃ ಚಾಲಿತ ವೇತನ ಬಡ್ತಿ ವಿಷಯಗಳಿಗೆ ಸಂಬಂಧಪಟ್ಟಂತೆ ತೊಂದರೆಯಾಗಿದೆ ಎಂದು ಅರ್ಜುನ ಕಾಖಂಡಕಿ ತಿಳಿಸಿದರು.

ವಿಜಯಕುಮಾರ ಹಲಕುರ್ಕಿ ಮಾತನಾಡಿ, 2017 ರವರೆಗೆ ನೇಮಕವಾದ 1 ರಿಂದ 7 ಕ್ಕೆ ನೇಮಕವಾದ ಶಿಕ್ಷಕರೆಂದು ಪರಿಗಣಿಸಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳು, 2017 ರ ನಂತರ ನೇಮಕವಾದ ಶಿಕ್ಷಕರಿಗೆ ಅನ್ವಯಿಸಬೇಕು ಹಾಗೂ ಯಾವುದೆ ಕಾರಣಕ್ಕೂ 2016 ಕ್ಕಿಂತ ಮೊದಲು ನೇಮಕಾತಿಯಾದವರಿಗೆ ಪೂರ್ವಾನ್ವಯ ಗೊಳಿಸಬಾರದು ಮತ್ತು 2017 ವೃಂದ ಮತ್ತು ನೇಮಕಾತಿ ನಿಯಮಗಳು 2016 ಕ್ಕಿಂತ ಮುಂಚೆ ನೇಮಕವಾಗಿ ಹೊಂದಿದ ಶಿಕ್ಷಕರಿಗೆ ಅನ್ವಯವಾಗುವುದಿಲ್ಲ ಎಂದು ಕಾರ್ಯಾದೇಶ ಹೊರಡಿಸಿ, 1–7/8 ಕ್ಕೆ ನೇಮಕ ಹೊಂದಿದವರನ್ನು ಪಿ ಎಸ್ ಟಿ ಎಂದು ಪದನಾಮ ಮಾಡಿ 1 ರಿಂದ 5 ಕ್ಕೆ ಸೀಮಿತಗೊಳಿಸಿರುವುದನ್ನು ಹಿಂಪಡೆಯಬೇಕು ಎಂಬುದು ನಮ್ಮ ಹಕ್ಕೊತ್ತಾಯವಾಗಿದೆ ಎಂದು ತಿಳಿಸಿದರು.

ಬಸವರಾಜ ಹನಗಂಡಿ, ಆರ್. ವಿ. ಲಮಾಣಿ, ಅರುಣ ಕುಲಕರ್ಣಿ, ಪ್ರಶಾಂತ ಹೊಸಮನಿ, ಮಲ್ಲಿಕಾರ್ಜುನ ಗಡೆನ್ನವರ, ಶೈಲಾ ಮಿರ್ಜಿ, ಆರ್. ಬಿ. ದುತ್ತರಗಾವಿ, ಜಿ. ಎಸ್. ಕಲಬುರ್ಗಿ ಎ.ಐ. ಡಾಂಗೆ, ಜಿ. ಐ. ಹತ್ತಳ್ಳಿ, ವಿ. ಸಿ. ಹಿರೇಮಠ, ಜಿ. ಎಸ್. ಕಟ್ಟಿಮನಿ, ಬಸವರಾಜ ಮುಧೋಳ, ಜಗದೀಶ ಕುಲ್ಲಳ್ಳಿ, ಆರ್.ವಿ. ಗೌಡರ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಪೋಲಿಯೋ ನಿರ್ಮೂಲನೆಯಲ್ಲಿ ರೋಟರಿ ಸಂಸ್ಥೆ ಶ್ರಮವಿದೆ

**ಜಮಖಂಡಿ :** ಭಾರತ ದೇಶದಲ್ಲಿ ಪೋಲಿಯೋ ನಿರ್ಮೂಲನೆಯಲ್ಲಿ ಸರ್ಕಾರದ ಪರಿಶ್ರಮ ಎಷ್ಟಿದಿಯೋ ಅದಕ್ಕಿಂತ ಹೆಚ್ಚು ರೋಟರಿ ಸಂಸ್ಥೆಯ ಪರಿಶ್ರಮವಿದೆ ಎಂದು ಬೆಳಗಾವಿಯ ರೋಟರಿ ಸಂಸ್ಥೆ ಪ್ರಮುಖರಾದ ಡಾ.ಸತೀಶ ಇಳಕಲ್ ಹೇಳಿದರು.




ನಗರದ ಬಸವೇಶ್ವರ ವೃತ್ತದಲ್ಲಿರುವ ಗ್ರಾಂಡ್ ಇನ್ ಹೋಟೆಲನಲ್ಲಿ ನಡೆದ ರೋಟರಿ ಸಂಸ್ಥೆ ರಾಮತೀರ್ಥ ಸೇವಾ ದೀಕ್ಷಾ ಸಮಾರಂಭ ಹಾಗೂ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕ, ಮಹಾರಾಷ್ಟ್ರ, ಗೋವಾ ರಾಜ್ಯಗಳಲ್ಲಿ ಉಚಿತವಾಗಿ ಕೃತಕ ಕೈಜೋಡಣೆ, ನೇತ್ರ ಶಿಬಿರ ಹಮ್ಮಿಕೊಳ್ಳ ಲಾಗಿದೆ. ರೋಟರಿ ಸಂಸ್ಥೆ ದಾನ, ಧರ್ಮ, ಸಹಾಯ ಮಾಡುವ ಗುಣ ಕಲಿಸುತ್ತದೆ. ವಯಕ್ತಿಕ ಜೀವನ ತೊರೆದು ಸಮಾಜದ ಸೇವೆ ಸಮಾಜಮುಖಿ ಕೆಲಸಗಳನ್ನು ಮಾಡಬೇಕು ಎಂದರು.

ಅಧಿಕಾರ ಸ್ವೀಕರಿಸಿದ ನೂತನ ಅಧ್ಯಕ್ಷ ಕಿರಣ ಜಾಲಿಹಾಳ ಮಾತನಾಡಿ, ಕರ್ತವ್ಯವನ್ನು ನಿಷ್ಠೆಯಿಂದ ಪರಿಪಾಲನೆ ಮಾಡಬೇಕು ಪೌರಕಾರ್ಮಿಕರ ಕಾರ್ಮಿಕರಿಗೆ ಉಚಿತ ಆರೋಗ್ಯ ಶಿಬಿರ, ಅನಾಥ ಮಕ್ಕಳಿಗೆ ಕಲಿಕಾ ಉಪಕರಣ ನೀಡುವುದು. 200 ಜನರಿಗೆ ಉಚಿತ ಕಣ್ಣಿನ ತಪಾಸಣೆ, ವೃತ್ತಿಪರ ನಿರತರಾದ ಜನರಿಗೆ ಸನ್ಮಾನಿವುದು, ಉಚಿತ ಪಶು ಆರೋಗ್ಯ ತಪಾಸಣಾ ಶಿಬಿರ ಸಹಿತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರತಿಶತ 98.24 ಪಡೆದ ಭವಾನಿ ನಿಂಬರಗಿ ಬಡಚಿಕರ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಮಲಾಬಾಯಿ ಜನಗೌಡ ಪುರಸ್ಕಾರವನ್ನು ಸೌಮ್ಯ ಅರಕೇರಿ, ಸೌಜನ್ಯ ನಾವಿ, ರಾಹುಲ ಗುಡ್ಲಿ ವಿತರಿಸಲಾಯಿತು. ರಂಗ ಕಲಾವಿದೆ ವಿಶಾಲಾಕ್ಷಿ ರಾಮದುರ್ಗ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಸಹಾಯಕ ಗವರ್ನರ ಆರ್.ಪಿ.ನ್ಯಾಮಗೌಡ ಮಾತನಾಡಿದರು. ವೇದಿಕೆಯಲ್ಲಿ ಕಾರ್ಯದರ್ಶಿ ಜಗದೀಶ ಮಣಿಕಟ್ಟಿ, ಖಜಾಂಚಿ ಬಸವರಾಜ ಕಲ್ಯಾಣಶೆಟ್ಟಿ ಸಹಿತ ಹಲವರು ಇದ್ದರು.

ಹಿಂದಿನ ಅಧ್ಯಕ್ಷ ಸಿದ್ರಾಮ ನಾವಿ ಸ್ವಾಗತಿಸಿ, ವರದಿ ವಾಚಿಸಿರು. ಸುಜಿತ್ ವಾಟವೆ ಹಾಗೂ ವಿಶ್ವನಾಥ ಸಾವಳಗಿ ಅತಿಥಿಗಳ ಪರಿಚಯ ಮಾಡಿದರು. ಉಪಪ್ರಾಚಾರ್ಯ ಮಹಾಂತೇಶ ನರಸನಗೌಡರ ನಿರೂಪಿಸಿದರು. ಚಿದಾನಂದ ಸಿದ್ಧಾಪೂರಮಠ ವಂದಿಸಿದರು.

# ವಿಷಯ ಯಾವುದೇ ಇರಲಿ ಸಾಧನೆ ಮುಖ್ಯ

**ರಬಕವಿ :** ವಿದ್ಯಾರ್ಥಿಗಳು ಯಾವುದೇ ವಿಷಯವಿರಲಿ ಅದರಲ್ಲಿ ಸಾಧನೆ ಮಾಡುವುದು ಮುಖ್ಯ. ವಿಜ್ಞಾನ ವಿಭಾಗದಲ್ಲಿ ಪ್ರತಿಯೊಂದು ವಿಷಯವು ತನ್ನದೇಯಾದ ಪ್ರಾಮುಖ್ಯತೆ ಹೊಂದಿದೆ. ಆದ್ದರಿಂದ ಯಾವುದಕ್ಕೂ ನಿರ್ಲಕ್ಷ್ಯ ಬೇಡ. ನಿಮಗೆ ಕಠಿಣವಾದ ವಿಷಯಕ್ಕೆ ಸ್ವಲ್ಪ ಜಾಸ್ತಿ ಮಹತ್ವ ನೀಡಿ ಎಂದು ಬಾಗಲಕೋಟೆ ವೃತ್ತದ ಅಸಿಸ್ಟೆಂಟ್ ಡ್ರಗ್ ಕಂಟ್ರೋಲರ್ ಡಾ. ವೀರೇಶಬಾಬು ಎಸ್. ವಿ. ಹೇಳಿದರು.



ಅವರು ರಾಮಪೂರದ ಪೂರ್ಣಪ್ರಜ್ಞ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಶಿಕ್ಷಕರ ಬಗ್ಗೆ ಯಾವತ್ತೂ ಕೀಳರಿಮೆ ಬೇಡ. ಅವರನ್ನು ಗೌರವದಿಂದ ಕಾಣಿರಿ. ತಂದೆ ತಾಯಿ ನಂತರ ನಿಮ್ಮ ಯಶಸ್ಸಿಗೆ ಹೆಮ್ಮೆ ಪಡುವ ವ್ಯಕ್ತಿ ಶಿಕ್ಷಕರಾಗಿದ್ದಾರೆ. ವಿದ್ಯಾರ್ಥಿಗಳು ದೊಡ್ಡ ಕನಸು ಕಾಣಬೇಕು. ಅಂದಾಗ ಮಾತ್ರ ನಿಮ್ಮ ಜೀವನದ ಗುರಿ ಸಾಧಿಸಲು ಸಾಧ್ಯ. ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಿ ಜೀವನ ಸಾರ್ಥಕ ಪಡಿಸಿಕೊಳ್ಳಿ. ಸಮಯವನ್ನು ಸರಿಯಾಗಿ ಬಳಸಿಕೊಂಡು ತಂದೆ ತಾಯಿಗಳ ಅಪೇಕ್ಷೆಯಂತೆ ಅವರ ಕನಸುಗಳನ್ನು ನನಸು ಮಾಡಲು ಪ್ರಯತ್ನಿಸಿ. ಗುರಿ, ಪ್ರಯತ್ನ ನಿರಂತರವಾಗಿರಲಿ. ವಿದ್ಯಾ ವಿನಯತೆ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದ ನಾಗೇಶ ಸುಂಕದ ಅವರನ್ನು ಸನ್ಮಾನಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ ಚೇರಮನ್ನರಾದ ಸಿದ್ದಪ್ಪ ವೆಂಕಪ್ಪ ಮೇಣಿ ವಹಿಸಿದ್ದರು. ಉಪ ಚೇರಮನ್ನರಾದ ರಾಮದಾಸ ಸಿಂಘನ, ಕಾರ್ಯದರ್ಶಿ ಶಕೀಲ ನದಾಫ, ಖಜಾಂಚಿ ಎಸ್. ಕೆ. ಕರಡಿ, ಶಂಕರ ಸಿಂಘನ, ಪ್ರಾಚಾರ್ಯ ಎ. ಕೆ. ಕಾಡದೇವರ, ಎಸ್. ಬಿ. ಹಟ್ಟಿ, ಶ್ರೀಮತಿ ಬೌರಮ್ಮ ಆರ್. ಬಾಗಲಕೋಟ, ಎ. ಎಚ್. ಬಾಗೆನ್ನವರ, ಶೆಹಾನ ನದಾಫ, ಬಿ. ಎಂ. ಮಠದ, ಎಂ. ಆರ್. ಮುಲ್ಲಾ, ಎಲ್. ಜಿ. ಹುಲಕುಂದ, ಎಂ. ಎಸ್. ಉಮದಿ, ಆರ್. ಎಸ್. ಮಟ್ಟಿಕಲ್ಲಿ, ವಿ. ಎ. ಲಠ್ಠೆ, ಎಂ. ಎನ್. ಹುದ್ದಾರ, ಎಸ್. ಎಸ್. ಸಿಂಘೆ, ವಿ. ಆರ್. ಕುಂದರಗಿ, ಎಸ್. ಸಿ. ಚತುರಬಾನ, ಎಂ. ಕೆ. ಮಲಾಬಾದಿ, ವಿ. ಬಿ. ದೇವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಧನಾತ್ಮಕ ಚಿಂತನೆಯಿಂದ ಮಾತ್ರ ಯಶಸ್ಸು ಸಾಧ್ಯ: ಪ್ರೊ. ಆದರ್ಶ ಎಚ್.ಎಸ್

**ಮೂಡಲಗಿ :** ಯಶಸ್ಸನ್ನು ಸಾಧಿಸಲು, ದೈನಂದಿನ ಜೀವನದಲ್ಲಿ ಕೆಲವು ಬದಲಾವಣೆಗಳು ಅತ್ಯಗತ್ಯ. ಧನಾತ್ಮಕ ಅಲೋಚನೆಗಳನ್ನು ನಾವು ನಮ್ಮಲ್ಲಿ ರೂಪಿಸಿಕೊಂಡಾಗ ಮಾತ್ರ ಯಶಸ್ಸು ನಮ್ಮನ್ನು ಹಿಂಬಾಲಿಸಿಕೊಂಡು ಬರುತ್ತದೆ ಎಂದು ತುಕ್ಕಾನಟ್ಟಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಆದರ್ಶ ಎಚ್.ಎಸ್. ಹೇಳಿದರು.



ಕಲ್ಲೋಳಿಯ ಎಸ್.ಆರ್.ಇ.ಎಸ್. ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ತುಕ್ಕಾನಟ್ಟಿಯ ಬರ್ಡ್ಸ್ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಕೃಷಿ ಪ್ರಾತ್ಯಕ್ಷಿತೆ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಯಶಸ್ವಿಯಾಗಲುಅಥವಾಶ್ರೀಮಂತರಾಗಲು ಹಲವು ಮಾರ್ಗಗಳಿವೆ. ಆದರೆ ತಪ್ಪು ಮಾರ್ಗವನ್ನು ಅನುಸರಿಸುವುದು ನಮಗೆ ಸ್ವಲ್ಪ ಸಮಯದವರೆಗೆ ಸಂತೋಷವನ್ನು ನೀಡಬಹುದು. ಸರಿ ಮಾರ್ಗ ಆಯ್ದುಕೊಂಡಾಗ ನಮ್ಮ ಜೀವನದುದ್ದಕ್ಕೂ ಯಶಸ್ಸು, ಶ್ರೀಮಂತಿಕೆ, ಸಂತೋಷ ಮತ್ತು ಗೌರವವನ್ನು ನೀಡುತ್ತದೆ ಕೃಷಿ ಕ್ಷೇತ್ರದಲ್ಲಿ ವೈಜ್ಞಾನಿಕತೆಯನ್ನು ಅಳವಡಿಸಿಕೊಳ್ಳುವ ಮೂಲಕ ಸಾಕಷ್ಟು ಪ್ರಗತಿಯನ್ನು ಸಾಧಿಸಿ, ಲಾಭ ಗಳಿಸಬಹುದು. ಸ್ವಯಂಸೇವಕರು, ಸಾರ್ವಜನಿಕರು ನಮ್ಮ ಕೃಷಿ ವಿಜ್ಞಾನ ಕೇಂದ್ರದ ಪ್ರಯೋಜನವನ್ನು ಪಡೆಯಬೇಕು ಎಂದರು.

ಎನ್ನೆಸ್ಸೆಸ್ ಕಾರ್ಯಕ್ರಮ ಅಧಿಕಾರಿ ಶಂಕರ ಎಂ. ನಿಂಗನೂರ ಮಾತನಾಡಿ, ಜಗತ್ತಿನಲ್ಲಿರುವ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯ ಯಶಸ್ಸಿಗಾಗಿ ಹಾತೊರೆಯುತ್ತಾರೆ. ಯಶಸ್ಸೆಂಬುದು ಹಣ ಕೊಟ್ಟು ಖರೀದಿಸುವಂಥದ್ದಲ್ಲ ಅಥವಾ ಯಾರೋ ನಮಗೆ ದಾನವಾಗಿ ನೀಡುವಂತದ್ದೂ ಅಲ್ಲ. ಯಶಸ್ಸಿನ ಸೂತ್ರವಿರುವುದು ಬರೀ ಸ್ವ ಪ್ರಯತ್ನದಲ್ಲಿ. ಸಾಧನೆಯ ಬಗೆಗಿನ ಕನಸುಗಳನ್ನುನಾವುಕಾಣುತ್ತೇವೆಯಾದರೂ ಅವು ಗಳನ್ನುನನಸಾಗಿಸಲುಪ್ರಯತ್ನವನ್ನೇ ಮಾಡುವುದಿಲ್ಲ. ನಮ್ಮ ಕನಸುಗಳನ್ನು ಸಾಕಾರಗೊಳಿಸಲು ಯಾರು ಸಹಾಯ ಮಾಡಿಯಾರೆಂಬ ನಿರೀಕ್ಷೆಯಲ್ಲಿಯೇ ದಿನ ಕಳೆಯುತ್ತಿರುತ್ತೇವೆ. ಪುಸ್ತಕಗಳನ್ನು ಓದುವುದರಿಂದ,

ಅನುಭವ ಇದೆ ಎಂದ ಮಾತ್ರಕ್ಕೆ ಯಶಸ್ಸು ದೊರಕುವುದಿಲ್ಲ. ಸಾಧಕರ ಸಾಧನೆಯ ಮಾರ್ಗಗಳು ನಮಗೆ ಪ್ರೇರಣೆ ಯಾಗಬೇಕು ಮಾತ್ರವಲ್ಲದೆ ಅವುಗಳ ಅನುಷ್ಠಾನವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಸಹ ಕಾರ್ಯಕ್ರಮಾಧಿಕಾರಿ ಡಿ.ಎಸ್.ಹುಗ್ಗಿ, ವಾಣಿಜ್ಯಶಾಸ್ತ್ರಉಪನ್ಯಾಸಕ ವಿಲಾಸ ಕೆಳಗಡೆ, ಸ್ವಯಂಸೇವಕರು ಉಪಸ್ಥಿತರಿದ್ದರು. ಪೂಜಾ ಗುಡಗುಡಿ ನಿರೂಪಿಸಿದರು. ವೀಣಾ ಕಂಕಣವಾಡಿ ಪ್ರಾರ್ಥಿಸಿದರು. ಉಮೇಶ ಪಡದಲ್ಲಿ ವಂದಿಸಿದರು.

# ಸದೃಢ ದೇಹದಲ್ಲಿ ಸದೃಢ ಮನಸ್ಸನ್ನು ನಿರ್ಮಿಸುವುದೇ ಶಿಕ್ಷಣ: ಶಿಕ್ಷಕ ಪ್ರಕಾಶ ಪಾಟೀಲ



**ಮೂಡಲಗಿ :** ಸದೃಢ ದೇಹದಲ್ಲಿ ಸದೃಢ ಮನಸ್ಸನ್ನು ನಿರ್ಮಿಸುವುದೇ ಶಿಕ್ಷಣ ಪ್ರತಿಯೊಬ್ಬರಲ್ಲೂ ವ್ಯಕ್ತಿತ್ವ ವಿಕಸನವಾಗಲುಈರೀತಿಯಾದಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಗುರಿ & ಗುರು ಅತ್ಯವಶ್ಯಕ, ಹಿಂದೆಗುರು ಮುಂದೆಗುರಿ ಇರಬೇಕು ಎಂದು ಕೆ ಎಚ್ ಸೋನವಾಲ್ಕರ ಸರಕಾರಿ ಪ್ರೌಢ ಶಾಲೆಯ ಶಿಕ್ಷಕ ಪ್ರಕಾಶ ಪಾಟೀಲ ಹೇಳಿದರು.

ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ಶ್ರೀ ಶಿವಬೋಧರಂಗ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿ ಒಕ್ಕೂಟದ ಉದ್ಘಾಟನಾ ಸಮಾರಂಭ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು,

ಗೋಕಾಕದ ಶಂಕರಲಿಂಗ ಪ್ರೌಢ ಶಾಲೆಯ ಸಹ ಶಿಕ್ಷಕ ರಾಮಚಂದ್ರ ಕಾಕಡೆ ಮಾತನಾಡಿ, ಸಣ್ಣವರಿದ್ದಾಗ ಹಣ್ಣು ಕೊಡುತ್ತಾರೆ ದೊಡ್ಡವರಾದಾಗ ಹೆಣ್ಣು ಕೊಡುತ್ತಾರೆ ಸತ್ತಾಗ ಮಣ್ಣು ಕೊಡುತ್ತಾರೆ ಆದರೆ ಬದುಕಿಗೆ ಬಣ್ಣವನ್ನು ಕೊಡುವವರು ಶಿಕ್ಷಕರು, ಜಗತ್ತಿನಲ್ಲಿ ಅತಿ ಹೆಚ್ಚು ಯುವಕರನ್ನು ಹೊಂದಿದ ದೇಶ ಭಾರತ ತಿಂದ ಬದುಕು ತಿಳಿದು ಬಾಳು, ಮಕ್ಕಳು ಮನುಕುಲದ ಆಶಾಕುಸುಮಗಳು ಅವು ಬಾಡದಂತೆ ನೋಡಿಕೊಳ್ಳುವುದು ಅತ್ಯವಶ್ಯಕ ಎಂದು ಹೇಳಿದರು. ಎಂದು ಹೇಳಿದರು,

ಮೂಡಲಗಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೆಂಕಟೇಶ ಸೋನವಾಲ್ಕರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲಿಯಲು ಬಂದಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಸಲಹೆಯ ಮಾರ್ಗದರ್ಶನವನ್ನು ಎಲ್ಲಾ ಬೋಧಕ ಮತ್ತು ಪ್ರಾಚಾರ್ಯರಿಂದ ಪಡೆದುಕೊಳ್ಳಿ ಎಂದು ಹೇಳಿದರು, ತಂದೆ–ತಾಯಿ ತಲೆ ತಗ್ಗಿಸುವಕಾರ್ಯ ಮಾಡದೇ ಅವರು ತಲೆ ಎತ್ತಿ ನಡೆಯುವ ವ್ಯಕ್ತಿಗಳಾಗಿ ಎಲ್ಲ ವಿದ್ಯಾರ್ಥಿಗಳ ಕರ್ತವ್ಯವಾಗಿದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ರವೀಂದ್ರ ಸೋನವಾಲ್ಕರ, ನಿರ್ದೇಶಕ ಅಪ್ಪಾಸಾಬ ಹೊಸಕೋಟಿ, ಕಾಲೇಜಿನ ಪ್ರಾಚಾರ್ಯ ಎಮ್. ಎಸ್.ಪಾಟೀಲಮತ್ತುಉಪನ್ಯಾಸಕಎಸ್.ಕೆ.ಹೀರೆಮಠ, ಬಿ.ಜಿ.ಗಡಾದ, ಎಲ್.ಆರ್.ಧರ್ಮಟ್ಟಿ, ಎಚ್.ಎಮ್. ಹತ್ತರಕಿ, ಆರ್.ಎಸ್.ಹಾದಿಮನಿ, ಎಚ್.ಡಿ.ಚಂದರಗಿ, ಎಸ್.ಪಿ.ಸಣ್ಣವೀರಣ್ಣ, ಆರ್.ಎಚ್.ಯಕ್ಕುಂಡಿ, ಎಮ್.ಜಿ.ಹೆಬ್ಬಳ್ಳಿ, ಡಾ॥ ಆರ್.ಪಿ.ಬಿರಾದಾರ, ಎಸ್. ಕೆ.ಮಠದ ಹಾಗೂ ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಅಕ್ಷರದಾಸೋಹ ಯೋಜನೆ ವಿದ್ಯಾರ್ಥಿಗಳ ಹಾಜರಾತಿಗೆ ಪೂರಕ

**ಮೂಡಲಗಿ :** ಸರ್ಕಾರದ ಮಹತ್ವಾಕಾಂಕ್ಷೆ ಅಕ್ಷರದಾಸೋಹ ಯೋಜನೆ ವಿದ್ಯಾರ್ಥಿಗಳ ಹಾಜರಾತಿ ಸುಧಾರಣೆಗೆ ಪೂರಕವಾಗಿದೆ ಎಂದು ಮುಖ್ಯಾದ್ಯಾಪಕ ಎ.ವ್ಹಿ.ಗಿರೆಣ್ಣವರ ಹೇಳಿದರು. ಅವರು ತುಕ್ಕಾನಟ್ಟಿಯ ಸರ್ಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಕ್ಷರದಾಸೋಹ ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ಭೋಜನ ಏರ್ಪಡಿಸಿ ಮಾತನಾಡುತ್ತಿದ್ದರು.



ಸರ್ಕಾರಿ ಶಾಲೆಗಳಲ್ಲಿ ಬಡ ಹಾಗೂ ಮದ್ಯಮವರ್ಗದ ಕುಟುಂಬ ಮಕ್ಕಳಿಗೆ ಅಕ್ಷರದಾಸೋಹ ಯೋಜನೆ ಆಸರೆಯಾಗಿದೆ. ಕೂಲಿ ನಾಲಿ ಮಾಡುವ ಪಾಲಕರಿಗೆ ಶಾಲೆಗಳಲ್ಲಿ ಮಕ್ಕಳಿಗೆ ಊಟ ಸಿಗುತ್ತಿರುವದರಿಂದ ಅವರು ತಮ್ಮ ಕಾರ್ಯಗಳಲ್ಲಿ ನಿಶ್ಚಿಂತೆಯಿಂದ ಕೆಲಸ ಮಾಡುತ್ತಾರೆ. ಮಕ್ಕಳ ಹಸಿವು ನೀಗಿದಾಗ ಹಾಗೂ ಪೌಷ್ಠಿಕಾಂಶದ ಆಹಾರ ಸಿಕ್ಕಾಗ ಮಕ್ಕಳು ದೈಹಿಕ ಹಾಗೂ ಮಾನಸಿಕ ಸದೃಡರಾಗುತ್ತಾರೆ ಎಂದರು. ಈ ಶಾಲೆಯಲ್ಲಿ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಹಾಗೂ ಸಮುದಾಯದ ಸಹಕಾರದೊಂದಿಗೆ ಮೇಲಿಂದ ಮೇಲೆ ವಿಶೇಷ ಆಹಾರ ತಯಾರಿಸಲಾಗುತ್ತಿದೆ ಎಂದರು.

ಇವತ್ತು ಸುಮಾರು 700 ವಿದ್ಯಾರ್ಥಿಗಳಿಗೆ ವಿಶೇಷ ಖಾದ್ಯಗಳಿಂದ ತಯಾರಿಸಿದ ಕಲ್ಕತ್ತಾ ಖೀರ, ಖುಷ್ಕಾ ರೈಸ್, ಹೆಸರು ಬೇಳೆ ಸಾಂಬಾರು, ಚಪಾತಿ ಮಸಾಲೆ ರೊಟ್ಟಿ. ಬದನೇಕಾಯಿ ಪಲ್ಯ, ಹೆಸರು ಕಾಳು ಪಲ್ಯ, ಮೊಸರು, ಉಪ್ಪಿನ ಕಾಯಿ, ಗುರೆಳ್ಳ ಹಿಂಡಿ ಅಗಸಿ ಹಿಂಡಿಯನ್ನು ತಯಾರಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಕುಸುಮಾ ಚಿಗರಿ, ವಿಮಲಾಕ್ಷಿ ತೋರಗಲ್, ಪುಷ್ಪಾ ಭರಮದೆ, ಮಹಾದೇವ ಗೋಮಾಡಿ, ಬಸವರಾಜ ನಾಯಕ, ಪ್ರಿಯಾಂಕಾ ಡಿ.ಕೆ. ಸೋಮಶೇಖರ ವಾಯ್.ಆರ್., ಚನ್ನಬಸಪ್ಪ ಸೀರಿ, ಸುಜಾತಾ ಕೋಳಿ, ರೂಪಾ ಹೂಲಿಕಟ್ಟಿ, ಲಕ್ಷ್ಮೀ ಹೆಬ್ಬಾಳ ಹಾಗೂ ಅತಿಥಿ ಶಿಕ್ಷಕರಾದ ಖಾತೂನ ನದಾಫ, ಶಿವಲೀಲಾ ಹುಲಕುಂದ, ಹೊಳೆಪ್ಪಾ ಗದಾಡಿ ಯಮುನಾ, ಹಮ್ಮನವರ, ಮಲಪ್ವಾ ಹಮ್ಮನವರ, ಭಾಗ್ಯಶ್ರೀ ದಡ್ಡಿಮನಿ ಭಾಗವಹಿಸಿದ್ದರು.

# ಜಿ.ಪಿ.ಎಸ್ ಮತ್ತು ಪ್ಯಾನಿಕ್ ಬಟನ್ ಆಳವಡಿಕೆಗೆ ವಿರೋಧ

**ಕೊಲ್ಹಾರ :** ವಾಹನಗಳಿಗೆ ಪ್ಯಾನಿಕ್ ಬಟನ್, ಜಿಪಿಎಸ್ ಅಳಡಿಕೆ ಮಾಡಲು ಸರ್ಕಾರ ಆದೇಶ ನೀಡಿರುವುದು ಅವೈಜ್ಞಾನಿಕ ಕೂಡಲೇ ಸರ್ಕಾರ ಆದೇಶ ಹಿಂಪಡೆಯಬೇಕು ಎಂದು ಕರ್ನಾಟಕ ಚಾಲಕರ ಒಕ್ಕೂಟ ಸಂಘದ ಕೊಲ್ಹಾರ ತಾಲೂಕಾ ಪದಾಧಿಕಾರಿಗಳ ನೇತೃತ್ವದಲ್ಲಿ ತಾಲೂಕ ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಒಕ್ಕೂಟದ ತಾಲೂಕ ಅಧ್ಯಕ್ಷ ಸಿದ್ಧ ಗಣಿ ಮಾತನಾಡಿ ವಾಹನಗಳಿಗೆ ಜಿ.ಪಿ.ಎಸ್ ಮತ್ತು ಪ್ಯಾನಿಕ್ ಬಟನ್ ಆಳವಡಿಸಲು ಸರ್ಕಾರದ ಆದೇಶ ನೀಡಿದ್ದು ಅವೈಜ್ಞಾನಿಕವಾಗಿದೆ ಹಾಗೂ ಬಡ ಚಾಲಕರಿಗೆ ಆರ್ಥಿಕ ಹೊರೆಯಾಗುತ್ತಿದ್ದು ಕೂಡಲೇ ಆದೇಶವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ಅಲ್ಲದೆ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಏಜೆಂಟರ ಹಾವಳಿ ಅತಿಯಾಗಿದ್ದು ಚಾಲನಾ ಪರವಾನಿಗೆ, ಚಾಲನಾ ನವೀಕರಣ ಹಾಗೂ ಇತರೆ ಕೆಲಸಗಳಿಗಾಗಿ ಪ್ರಾದೇಶಿಕ ಸಾರಿಗೆ ಕಚೇರಿಗೆ ತೆರಳಿದರೆ ಅಧಿಕಾರಿಗಳು ಸ್ಪಂದನೆ ನೀಡದೆ ಏಜೆಂಟರ ಮೂಲಕ ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಅತಿ ಹೆಚ್ಚಿನ ಮೊತ್ತ ಪಡೆದು ಕೆಲಸಗಳನ್ನು ಮಾಡುತ್ತಿದ್ದಾರೆ ಹಣ ಕೊಡದಿದ್ದಲ್ಲಿ ಸುಖಾಸುಮ್ಮನೆ ಚಾಲಕರನ್ನು ಸತಾಯಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಗೈಬು ನದಾಫ, ಹಸನ ಕಲಾದಗಿ, ಅಮೀರ ಕೊರ್ತಿ, ಅಶ್ಪಾಕ ರಬಿನಾಳ, ಶಿವು ಹಗೆದಾಳ, ಆನಂದ ಬಜಂತ್ರಿ, ಗೈಬು ಹಳ್ಳಿ, ಕಾಲೀಕ ರಬಿನಾಳ, ಕಾಡು ನಾಲತವಾಡ ಹಾಗೂ ಇನ್ನಿತರರು ಇದ್ದರು.

# ನಕಾರಾತ್ಮದಿಂದ ಸಕಾರಾತ್ಮದೆಡೆಗೆ ಸಾಗಿ: ಅನುಪಮ ಅಗರವಾಲ

**ವಿಜಯಪುರ :** ಪ್ರತಿಯೊಬ್ಬ ವ್ಯಕ್ತಿ ಯಾವಾಗಲೂ ಪ್ರಗತಿಪಥದಲ್ಲಿ ಸಾಗಬೇಕಾದರೆ ಹಲವಾರು ಋಣಾತ್ಮಕ ಸಂಗತಿಗಳು ಎದುರಾಗುವದು ಸಹಜ. ಆದರೆ ಅವುಗಳನ್ನು ಒಂದೊಂದಾಗಿ ಯೋಚಿಸಿ ಮತ್ತು ಯೋಜನೆ ಹಾಕಿಕೊಂಡು ಮುನ್ನಡೆದಾಗ ಯಶಸ್ವಿಯಾಗಲು ಸಾಧ್ಯವೆಂದು ಉದ್ದಿಮೆದಾರ ಅನುಪಮ ಅಗರವಾಲ ಹೇಳಿದರು.

ವಿಜಯಪುರ ಉತ್ತರವಲಯ ಪ್ರೊಬಸ್ ಕ್ಲಬ್‌ನ 2024–25ನೇ ಸಾಲಿನ ನೂತನ ಸದಸ್ಯರ ಅಧಿಕಾರ ಹಸ್ತಾಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಾಯೋಗಿಕವಾಗಿ ಕೆಲವು ನಕಾರಾತ್ಮಕ ಸಂಗತಿ ಬರೆದು ಅದಕ್ಕೆ ಹತ್ತು ಸಕಾರಾತ್ಮಕ ಪರಿಹಾರ ಬರೆಯಿರಿ ಎಂದು ಹೇಳಿದರು. ಸಕಾರಾತ್ಮಕವಾಗಿ ಉತ್ತರಿಸಿದ ಕೆಲವು ಸದಸ್ಯರಿಗೆ ವಿಷಯದ ಚರ್ಚೆಗೆ ಒಳಪಡಿಸಿದರು. ಸರಿಯಾಗಿ ಉತ್ತರಿಸಿದವರಿಗೆ ಬಹುಮಾನ ನೀಡಿ, ಹಿರಿಯ ನಾಗರಿಕ ಕುರಿತು ಮಾತನಾಡಿದರು. ಅತಿಥತಿಗಳಾದ ದಿಲೀಪ ಪೂಜಾರಿ ಮಾತನಾಡಿದರು.

ನೂತನ ಅಧ್ಯಕ್ಷ ಶಾರದಾ ಐಹೊಳ್ಳಿಯರಿಗೆ ನಿಕಟಪೂರ್ವ ಅಧ್ಯಕ್ಷ ವಿಠ್ಠಲ ತೇಲಿ ಅಧಿಕಾರ ಹಸ್ತಾಂತರಿಸಿದರು. ಉಪಾಧ್ಯಕ್ಷರಾಗಿ ಮಾದೇವ ಹಾಲಳ್ಳಿ, ಕಾರ್ಯದರ್ಶಿಗಳಾಗಿ ಸುವರ್ಣಾ ತೇಲಿ, ಜಂಟಿ ಕರ್ಯದರ್ಶಿಗಳಾಗಿ ಸುಭಾಸ ಬೆಟಗೇರಿ, ಖಜಾಂಚಿಗಳಾಗಿ ಪರಶುರಾಮ ಪೋಳ ಅಧಿಕಾರ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ವಿ.ಸಿ.ನಾಗಠಾಣ, ಎಸ್.ಜಿ. ನಾಡಗೌಡ, ಅಕ್ಕಮಹಾದೇವಿ ಬುರ್ಲಿ, ಬಿ.ಎಂ. ಪಾಟೀಲ ಮುಂತಾದವರು ಉಪಸ್ಥಿತರಿದ್ದರು. ನೂತನ ಬ್ಯಾಕೋಡ ಸ್ವಾಗತಿಸಿದರು, ಜಗದೀಶ ಮೋಟಗಿ ವಂದಿಸಿದರು.

## ಸಂಘದಿಂದ ಗುರು ಪೂಜಾ ಉತ್ಸವ

# ರಾಷ್ಟ್ರ ಸೇವೆಗೆ ಸಂಘ ಅದ್ಭುತ ಅವಕಾಶ: ಬಾಬು ಹೊಸಕೋಟಿ



**ಮಹಾಲಿಂಗಪುರ :** ಸಶಕ್ತ, ಸಮೃದ್ಧ ಹಿಂದೂ ರಾಷ್ಟ್ರ ನಿರ್ಮಾಣ ಕಾರ್ಯಕ್ಕಾಗಿ ವ್ಯಕ್ತಿಗಳನ್ನು ಜೋಡಿಸುವ ಮಹತ್ಕಾರ್ಯವನ್ನು ರಾಷ್ಟ್ರೀಯ ಸ್ವಯಂ ಸೇವಾ ಸಂಘ ಮಾಡುತ್ತಿದೆ, ರಾಷ್ಟ್ರಸೇವೆಗೆ ಇದೊಂದು ಅದ್ಭುತ ಅವಕಾಶ ಎಂದು ಕುಟುಂಬ ಪ್ರಬೋಧನ ವಿಜಯಪುರ ವಿಭಾಗ ಸಂಯೋಜಕ ಬಾಬುಜಿ ಹೊಸಕೋಟಿ ಹೇಳಿದರು.

ಸ್ಥಳೀಯ ಮಾಧವಾನಂದ ಆಶ್ರಮದಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಗುರು ಪೂಜಾ ಉತ್ಸವ ಸಮಾರಂಭದ ಬೌದ್ಧಿಕದಲ್ಲಿ ಮಾತನಾಡಿದ ಆಷಾಢ ಮಾಸದ ಗುರು ಪೂರ್ಣಿಮೆ ವೇದಗಳನ್ನು ಸರಳಗೊಳಿಸಿದ ವೇದ ವ್ಯಾಸರ ವ್ಯಾಸ ಪೂರ್ಣಿಮೆ ನವ ಭಾರತ, ವಿಕಸಿತ ಭಾರತ ನಿರ್ಮಾಣಕ್ಕೆ ಶುಭ ಘಳಿಗೆ, ಶುಭ್ರ ಭಗವಾಧ್ವಜವೇ ಗುರುವಾಗಿ ತನು, ಮನ, ಧನ ಸರ್ವಸ್ವವನ್ನು ಸಂಘದ ಕಾರ್ಯಕ್ಕೆ ಸಮರ್ಪಣೆಗೆ ಸನ್ನದ್ಧವಾಗುವ ಶುಭ ಮುಹೂರ್ತ. ಸಂಘದಿಂದ ವ್ಯಕ್ತಿ ನಿರ್ಮಾಣ, ವ್ಯಕ್ತಿ ನಿರ್ಮಾಣದಿಂದ ರಾಷ್ಟ್ರ ನಿರ್ಮಾಣ ಗುರಿಯ ಸಾಕಾರಕ್ಕಾಗಿ ವಿದ್ಯಾರ್ಥಿ ಪರಿಷತ್ತು, ಸೇವಾ ಭಾರತಿ, ಸಹಕಾರ ಭಾರತಿ, ಪರಿಸರ ರಕ್ಷಣೆ, ಗೋ ಸಂರಕ್ಷಣೆ ಹೀಗೆ 40 ಕ್ಕೂ ಅಧಿಕ ಅಂಗಗಳಲ್ಲಿ ನಿಮ್ಮನ್ನು ಜೋಡಿಸುವ ಕಾರ್ಯವನ್ನು ಸಂಘ ಮಾಡುತ್ತಿದೆ ಎಂದರು.

ರಾಷ್ಟ್ರೋತ್ಥಾನ ಪರಿಷತ್ ಪ್ರಶಿಕ್ಷಣ ಭಾರತಿಯ ಸಂಪನ್ಮೂಲ ವ್ಯಕ್ತಿ ನಾರನಗೌಡ ಉತ್ತಂಗಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರತಿಯೊಬ್ಬ ಭಾರತೀಯನಿಗೂ ರಾಷ್ಟ್ರ ಸೇವೆ ಮಾಡಲು ಇರುವ ಏಕೈಕ ಅವಕಾಶ ರಾಷ್ಟ್ರೀಯ ಸೇವಾ ಸಂಘ. ಭಾರತ ಮಾತೆ, ಹಿಂದೂ ಧರ್ಮ, ಸನಾತನ ಸಂಸ್ಕೃತಿಯ ಹಿರಿಮೆ ಗರಿಮೆ ಸಾರುತ್ತಾ ಪ್ರತಿ ಭಾರತೀಯನೂ ಸಂಘದ ಮೂಲಕ ರಾಷ್ಟ್ರ ಮತ್ತು ಧರ್ಮದ ಸೇವೆಯಲ್ಲಿ ಬದುಕನ್ನು ಸಾರ್ಥಕ ಮಾಡಿಕೊಳ್ಳಲು ಒದಗಿರುವ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದರು. ಭಗವಾಧ್ವಜ ಅರ್ಚನೆ, ಅರ್ಪಣೆ ಮುಂತಾದ ಕಾರ್ಯಗಳು ಜರುಗಿದವು. ಜಮಖಂಡಿ ಜಿಲ್ಲಾ ಸೇವಾ ಪ್ರಮುಖ ವಿನೋದ ಜಾಧವ ಮತ್ತು ಸ್ಥಳೀಯ ಸಂಘದ ಸದಸ್ಯರು ಇದ್ದರು.

# ನಾಗರಪಂಚಮಿ–ಬಸವಪಂಚಮಿಯಾಗಿ ಆಚರಿಸಿದ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ



**ಜಮಖಂಡಿ :** ಸ್ವಸ್ಥ ಸಮಾಜದ ಸಹಕಾರ ಮೂರ್ತಿ, ಚಿತ್ತರಗಿಯ ಜ್ಯೋತಿ ಮಹಾಂತ ಶಿವಯೋಗಿಗಳು ನೇರ ನಿಷ್ಠುರ ಸ್ವಭಾವದವರಾಗಿದ್ದರು. ಯಾವುದೇ ಬೆದರಿಕೆಗಳಿಗೆ ಹೆದರದೆ ಸಮಾಜದ ಸೇವೆ ಗುರಿಯಾಗಿಟ್ಟುಕೊಂಡು ಹಗಲಿರುಳು ಶ್ರಮಿಸಿದರು. ದುಶ್ಚಟಗಳ ವಿರುದ್ಧ ಸಮರ ಸಾರಿದರು ಎಂದು ಸಂಪನ್ಮೂಲವ್ಯಕ್ತಿ ಶಿಕ್ಷಕ ಸಂಗನಬಸವ ಉಟಗಿ ಹೇಳಿದರು.

ತಾಲೂಕಿನ ಕುಂಬಾರಹಳ್ಳ ಸರಕಾರಿ ಪ್ರೌಢ ಶಾಲೆಯಲ್ಲಿ ವ್ಯಸನಮುಕ್ತ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಯುವಕರು, ಜನರು ಚಟದಿಂದ ದೂರ ಇರಬೇಕು. ಜಾತಿ ಮತಗಳನ್ನು ಮೀರಿ ಬಾಳಬೇಕು. ಮೂಢ ನಂಬಿಕೆಗಳನ್ನು ಹೋಗಲಾಡಿಸಿ ನಾಗರ ಪಂಚಮಿಯನ್ನು ಬಸವಪಂಚಮಿಯಾಗಿ ಆಚರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ನಾರಾಯಣ ಶಾಸ್ತ್ರಿ ಮಾತನಾಡಿ, ವಿಜಯ ಮಹಾಂತ ಸ್ವಾಮಿಗಳು ಜೋಳಿಗೆಯ ಮೂಲಕ ಸಮಾಜದ ಮಾನಸಿಕ ಮತ್ತು ದೈಹಿಕ ಸ್ವಾಸ್ಥ್ಯವನ್ನು ಕಾಪಾಡಿದ ಯೋಗಿಗಳಾಗಿದ್ದು, ಅವರ ಸಾಮಾಜಿಕ ಕಳಕಳಿ ವರ್ಣನಾತೀತವಾಗಿದೆ. ನಾವೆಲ್ಲರೂ ಚಟಗಳನ್ನು ಬಿಡುತ್ತೇವೆಂದು ಪ್ರತಿಜ್ಞೆಗೈದು ಮಹಾಂತರ ಆತ್ಮಕ್ಕೆ ನಿಜವಾದ ಶಾಂತಿಯನ್ನು ಕೊರೋಣ ಎಂದರು.

ದೈಹಿಕ ಶಿಕ್ಷಣ ಶಿಕ್ಷಕ ಬಾಹುಬಲಿ ಮುತ್ತೂರ ಪ್ರತಿಜ್ಞಾವಿಧಿ ಬೋಧಿಸಿದರು. ವಿದ್ಯಾರ್ಥಿನಿ ಕಲಾವತಿ ಪೂಜಾರಿ, ಮಹೇಶ್ವರಿ ಜೊಂಗನವರ ವ್ಯಸನ ಮುಕ್ತ ದಿನಾಚರಣೆ ಕುರಿತು ಮಾತನಾಡಿದರು. ವೇದಿಕೆಯಲ್ಲಿ ಶಿಕ್ಷಕರಾದ ಸಂಜೀವ ಝುಂಬುರೆ, ಸವಿತಾ ಬೆನಕಟ್ಟಿ, ಎ.ಎಂ. ಮೋಮಿನ್. ಶಕುಂತಲಾ ಬಿರಾದಾರ, ಶಾರದಾ ಮಠ, ಸಿ.ಟಿ.ಇ.ಪ್ರಶಿಕ್ಷಣಾರ್ಥಿಗಳಾದ ಮಾದೇವಿ ಜಾಲಿಹಾಳ, ಸವಿತಾ ನ್ಯಾಮಗೌಡ, ವಾಣಿಶ್ರೀ ಬಿರಾದಾರಪಾಟೀಲ, ಅಕ್ಷತಾ ಕೊಡ್ಡ್ಯಾಳ ಸಹಿತ ಹಲವರು ಇದ್ದರು.

# ಚಿಮ್ಮಡ: ಹದಗೆಟ್ಟ ರಸ್ತೆ ದುರಸ್ತಿಗೆ ಆಗ್ರಹ



**ಚಿಮ್ಮಡ :** ಗ್ರಾಮದ ಕನಕದಾಸ ವೃತ್ತದಿಂದ ಬಸ್ ನಿಲ್ದಾನಕ್ಕೆ ತೆರಳುವ ಎಲ್ಲಮ್ಮದೇವಿ ದೇವಸ್ಥಾನದ ಹಿಂದಿನ ಬೈಪಾಸ್ ರಸ್ತೆಯನ್ನು ಕೂಡಲೆ ದುರಸ್ತಿಗೊಳಿಸಬೇಕೆಂದು ಈ ಭಾಗದ ಸಂಚಾರಿಗಳು ಅಧಿಕಾರಿಗಳಿಗೆ ಆಗ್ರಹಿಸಿದ್ದಾರೆ.

ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ, ಬಸ್ ನಿಲ್ದಾನಕ್ಕೆ ತೆರಳಲು ಹಾಗೂ ವಾರದ ಸಂತೆಗಾಗಿ ಅತೀ ಹೆಚ್ಚು ಜನ ಸಂಚರಿಸುವ ಈ ರಸ್ತೆಯು ಸತತ ಮಳೆಯಿಂದಾಗಿ ರಸ್ತೆ ತುಂಬ ಗುಂಡಿಗಳಿಂದ ತುಂಬಿದ್ದು ಕಾಲಿಡಲು ಕೂಡ ಸ್ಥಳವಿಲ್ಲದಷ್ಟು ಗಲೀಜಾಗಿದೆ, ಎಲ್ಲಮ್ಮದೇವಿ ದೇವಸ್ಥಾನ ಹಾಗೂ ಸಾರ್ವಜನಿಕ ಶೌಚಾಲಯಗಳ ನಡುವೆ ಇಕ್ಕಟ್ಟಾಗಿರುವ ಈ ರಸ್ತೆಯಲ್ಲಿ ಸಂಚರಿಸಲು ಸಾರ್ವಜನಿಕರು ಪರದಾಡುವಂತಾಗಿದೆ,

ಅಲ್ಲದೇ ಖಾಸಗೀ ವಾಹನಗಳು ಹೆಚ್ಚಾಗಿ ಈ ಮಾರ್ಗವಾಗಿಯೇ ಸಂಚರಿಸುವುದರಿಂದ ಪಾದಚಾರಿಗಳಿಗೆ ನಿತ್ಯ ಕೆಸರಿನ ಸಿಂಚನವಾಗಿ ಅವರ ಪಾಡು ಹೇಳತೀರದಂತಾಗಿದೆ ಸಂಬಂಧಿಸಿದ ಅಧಿಕಾರಿಗಳು, ಜನಪ್ರತಿನಿಧಿಗಳು ಈ ಕುರಿತು ಗಮನಹರಿಸಿ ಕೂಡಲೆ ಈ ರಸ್ತೆಯನ್ನು ದುರಸ್ತಿಗೊಳಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಡಾ. ಪ್ರಭಾಕರ ಕೋರೆಯವರ 77ನೇ ಜನ್ಮ ದಿನಾಚರಣೆ



**ಮಹಾಲಿಂಗಪುರ :** ಶಿಕ್ಷಣ ಮಹರ್ಷಿ, ಮಾಜಿ ರಾಜ್ಯ ಸಭಾ ಸದಸ್ಯರು, ಪ್ರತಿಷ್ಠಿತ ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ.ಪ್ರಭಾಕರ ಕೋರೆಯವರ 77ನೇ ಜನ್ಮ ದಿನದ ನಿಮಿತ್ಯವಾಗಿ ಕೆಎಲ್ಇ ಸಂಸ್ಥೆಯ ಎಸ್‌ಸಿಪಿ ಕಲಾ,ವಿಜ್ಞಾನ ಮತ್ತು ಡಿ.ಡಿ ಶಿರೋಳ ವಾಣಿಜ್ಯ ಪದವಿ ಮಹಾವಿದ್ಯಾಲಯದ"ಲ್ಲಿ ಸಾಂಸ್ಕೃತಿಕ ಹಾಗೂ ಕ್ರೀಡಾ ವಿಭಾಗದ ವತಿಯಿಂದ ವಿವಿಧ ಚಟುವಟಿಕೆಗಳ ಉಧ್ಘಾಟನಾ ಸಮಾರಂಭ ಆಯೋಜಿಸಲಾಗಿತ್ತು. ಕಾರ್ಯಕ್ರಮ ಮುಖ್ಯ ಅಥಿತಿಯಾಗಿ ಭಾಗವಹಿಸಿದ್ದ ಬೆಳಗಾವಿಯ ಆರ್.ಎಲ್.ಎಸ್. ಕಾಲೇಜಿನ ನಿವೃತ ಅರ್ಥಶಾಸ್ತ್ರ ಉಪನ್ಯಾಸಕ ಜಿ.ಎ.ಮಠಪತಿ ಮಾತನಾಡಿ ಡಾ.ಪ್ರಭಾಕರ ಕೋರೆಯವರ ಶ್ರಮದ ಫಲವಾಗಿ ಕೆಎಲ್ಇ ಇಂದು ಇಷ್ಟು ದೊಡ್ಡ ಮಟ್ಟದಲ್ಲಿ ಬೆಳೆದಿದೆ. ಭಾರತದಲ್ಲಿ ಅಲ್ಲದೆ ದೇಶ ವಿದೇಶಗಳಲ್ಲಿ ಸಂಸ್ಥೆಗಳನ್ನು ಸ್ಥಾಪಿಸಿ ಎಲ್ಲ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದರು.

ಅಧ್ಯಕ್ಷತೆವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಕೆ. ಎಮ್.ಅವರಾದಿ ಮಾತನಾಡಿ ಡಾ.ಪ್ರಭಾಕರ ಕೋರೆಯವರು ಸರಳ ಸಜ್ಜನಿಕೆಯ ಮಾತೃ ಹೃದಯದ ವ್ಯಕ್ತಿತ್ವ ಹೊಂದಿದ್ದಾರೆ, ಡಾ.ಪ್ರಭಾಕರ ಕೋರೆಯವರು ತಮ್ಮ 38ನೇ ವಯಸ್ಸಿನಲ್ಲಿಯೇ ಕೆ.ಎಲ್.ಇ ಸಂಸ್ಥೆಯ ಕಾರ್ಯಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡು ಇಲ್ಲಿವರೆಗೆ ಸತತ 40 ವರ್ಷ ಅಂದರೆ ತಮ್ಮ ಬದುಕಿನ ಶೇ.70ರಷ್ಟು ಭಾಗ ಸಂಸ್ಥೆಗಾಗಿಯೇ ಶ್ರಮಿಸಿದ್ದರೆ, ಶಿಕ್ಷಣ,ಸಾಹಿತ್ಯ,ಉದ್ಯೋಗ,ಸಹಕಾರ,ಕೃಷಿ,ಸಂಸ್ಕೃತಿ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಇಂತಹ ಮಹಾನ ನಾಯಕನ ನಾಯಕತ್ವದಲ್ಲಿ ಕೆ.ಎಲ್.ಇ ಪರಿವಾರದ ಸದಸ್ಯರಾದ ನಾವೆಲ್ಲರೂ ಸುದೈವಿಗಳು ಎಂದರು. ಸ್ಥಳೀಯ ಆಡಳಿತ ಮಂಡಳಿ ಸದಸ್ಯರಾದ ಎ.ಬಿ.ಅಂಗಡಿ, ಸಂತೋಷ ಹುದ್ದಾರ, ಐಕ್ಯೂಎಸಿ ಸಂಯೋಜಕರಾದ ಡಾ.ಶ್ರೀಮತಿ ಎಸ್.ಡಿ.ಸೊರಗಾಂವಿ, ಉಪನ್ಯಾಸಕರಾದ ಎಮ್. ಎಮ್.ನಿಂಬರಗಿ, ಪಿ.ಎಸ್ ಹಿಪ್ಪರಗಿ , ಸಿ.ಎಮ್. ಐಗಳಿ, ಟಿ.ಡಿ.ಡಂಗಿ, ಎ.ಎಮ್.ಉಗಾರೆ,ಶ್ರೀಮತಿ ಆರ್.ಎಮ್.ಕಾಕಡೆ, ಶ್ರೇಯಾ ದಿವಾಣಜಿ, ವಿ.ಎ.ಅಡಹಳ್ಳಿ, ಆರ್.ವಿ.ಚೌಗಲಾ ಮತ್ತು ವಿದ್ಯಾರ್ಥಿಗಳು ಇದ್ದರು.

# ‘ಧೂಮಪಾನದಿಂದ ದೂರವಿದ್ದು ಶ್ವಾಸಕೋಶ ಕ್ಯಾನ್ಸರ್ ಮುಕ್ತರಾಗಿ’




**ಮೂಡಲಗಿ :** ಲಯನ್ಸ್ ಕ್ಲಬ್ ಮೂಡಲಗಿ ಪರಿವಾರದಿಂದ ಗುರುವಾರ ವಿಶ್ವಶ್ವಾಸಕೋಶ ಕ್ಯಾನ್ಸರ್ ದಿನಾಚರಣೆಯನ್ನು ಆಚರಿಸಿದರು.

ಮೂಡಲಗಿಯ ಬಸ್ ನಿಲ್ದಾಣದಲ್ಲಿ ಶ್ವಾಸಕೋಶ ಕ್ಯಾನ್ಸರ್ ಕುರಿತು ಮುಂಜಾಗೃತ ಕ್ರಮದ ಬಗ್ಗೆ ಕರಪತ್ರಗಳನ್ನು ಬಿಡುಗಡೆ ಮಾಡಿದ ಲಯನ್ಸ್ ಕ್ಲಬ್ ಅಧ್ಯಕ್ಷ ಸಂಜಯ ಮೋಕಾಶಿ ಮಾತನಾಡಿ ‘ಧೂಮಾಪಾನಮತ್ತುಧೂಮಪಾನಿಗಳಹೊಗೆಯನ್ನು ಸೇವಿಸುವುದುದರಿಂದ ಶ್ವಾಸಕೋಶ ಕ್ಯಾನ್ಸರ್ ಕಾಯಿಲೆ ವ್ಯಾಪಿಸುತ್ತದೆ. ಜನರು ಧೂಮಪಾನದಿಂದ ದೂರವಿರಬೇಕು’ ಎಂದರು.

ಬಾಲಶೇಖರ ಬಂದಿ ಮಾತನಾಡಿದರು.

‘ಧೂಮಪಾನದಿಂದ ದೂರ ಇರಿ, ಕ್ಯಾನ್ಸರದಿಂದ ಮುಕ್ತರಾಗಿರಿ’ ಎಂದು ಘೋಷಣೆಗಳನ್ನು ಹಾಕಿದರು. ಶ್ವಾಸಕೋಶ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವ ಕರಪತ್ರಗಳನ್ನು ಬಸ್ ನಿಲ್ದಾಣದಲ್ಲಿ ಜನರಿಗೆ ಹಂಚಿದರು.

ಲಯನ್ಸ್ ಗ್ಲೋಬಲ್ ಸರ್ವಿಸ್ ಟೀಮ್ ಸದಸ್ಯ ವೆಂಕಟೇಶ ಸೋನವಾಲಕರ, ಸಂಗಮೇಶ ಕೌಜಲಗಿ, ಮಹಾವೀರ ಸಲ್ಲಾಗೋಳ, ಡಾ. ಸಂಜಯ ಶಿಂಧಿಹಟ್ಟಿ, ಶ್ರೀಶೈಲ್ ಲೋಕನ್ನವರ, ಶಿವಾನಂದ ಕಿತ್ತೂರ, ಬಸ್ ನಿಲ್ದಾಣ ಸಾರಿಗೆ ನಿಯಂತ್ರಕ ಶ್ರೀಶೈಲ್ ಇದ್ದರು.

## ಘಟಪ್ರಭಾ ನದಿಗೆ 50 ಸಾವಿರ ಕ್ಯೂಸೆಕ್ ನೀರು:

# ಯಥಾಸ್ಥಿತಿ ಮುಂದುವರೆದ ಪ್ರವಾಹ



**ಮಹಾಲಿಂಗಪುರ :** ಉಕ್ಕಿ ಹರಿಯುತ್ತಿರುವ ಘಟಪ್ರಭಾ ನದಿಗೆ ಬರುತ್ತಿರುವ ನೀರಿನ ಪ್ರಮಾಣ ಬುಧವಾರ, ಗುರುವಾರ 63 ಸಾವಿರ ಕ್ಯೂಸೆಕ್‌ಗೆ ಏರಿಕೆಯಾಗಿತ್ತು. ಶುಕ್ರವಾರ 50 ಸಾವಿರ ಕ್ಯೂಸೆಕ್‌ಗೆ ಇಳಿದಿದೆ.

ಬುಧವಾರ ಮಧ್ಯಾಹ್ನ 3ರ ಮಾಹಿತಿಯಂತೆ ಘಟಪ್ರಭಾ ನದಿಗೆ ಹಿಡಕಲ್ ಜಲಾಶಯದಿಂದ ಬಿಡುತ್ತಿಉರುವ ನೀರು ಮತ್ತು ಹಿರಣ್ಯಕೇಶಿ ನದಿಯಿಂದ ಬರುವ ನೀರು ಸೇರಿ ದುಪದಾಳ ಜಲಾಶಯದಿಂದ ಘಟಪ್ರಭಾ ನದಿಗೆ 44480 ಕ್ಯೂಸೆಕ್, ಮಾರ್ಕಂಡೇಯ ಜಲಾಶಯದಿಂದ 3870, ಬಳ್ಳಾರಿನಾಲಾ 1962 ಸೇರಿದಂತೆ ಒಟ್ಟು 50,312 ಕ್ಯೂಸೆಕ್ ನೀರು ಘಟಪ್ರಭಾ ನದಿಗೆ ಹರಿದು ಬರುತ್ತಿದೆ.

**ಅಲ್ಪ ಇಳಿಮುಖ :**

ಘಟಪ್ರಭಾ ಪ್ರವಾಹದಿಂದ ಸಂಪೂರ್ಣ ಜಲಾವೃತವಾಗಿರುವ ನಂದಗಾಂವ ಮತ್ತು ಢವಳೇಶ್ವರ ಗ್ರಾಮದ ತಂಗುಪ್ರದೇಶದ ಮನೆಗಳಿಗೆ ನುಗ್ಗಿದ ನೀರು ಶುಕ್ರವಾರವು ಸಹ 4–5 ಅಡಿಯಷ್ಟು ಇಳಿದಿದೆ. ನಡುಗಡ್ಡೆಯಾದ ನಂದಗಾಂವ ಗ್ರಾಮದ ರಸ್ತೆಯ ಮೇಲಿನ ನೀರು ಇನ್ನು ಕಡಿಮೆಯಾಗಿಲ್ಲ. ಶನಿವಾರ ಮುಂಜಾನೆ ವೇಳೆಗೆ ನಡುಗಡ್ಡೆಯಾದ ನಂದಗಾಂವಗೆ ಹೋಗುವ ರಸ್ತೆ ಮೇಲಿನ ನೀರು ಕಡಿಮೆಯಾಗಬಹುದು ಎಂದು ಢವಳೇಶ್ವರ–ನಂದಗಾಂವ ನೊಡೆಲ್ ಅಧಿಕಾರಿ ವೆಂಕಟೇಶ ಬೆಳಗಲ್ ತಿಳಿಸಿದ್ದಾರೆ.

**ಎರಡು ಕಾಳಜಿ ಕೇಂದ್ರದಲ್ಲಿ ವ್ಯವಸ್ಥೆ :**

ಘಟಪ್ರಭಾ ನದಿಯ ಪ್ರವಾಹದಿಂದ ಸ್ಥಳಾಂತರವಾದ ನಂದಗಾಂವದ 52 ಕುಟುಂಬ, ಢವಳೇಶ್ವರದ 15 ಕುಟುಂಬದವರಿಗೆ ಕಾಳಜಿ ಕೇಂದ್ರದಲ್ಲಿ ಊಟ ಉಪಹಾರದ ವ್ಯವಸ್ಥೆ ಮಾಡಲಾಗುತ್ತಿದೆ. ಜಾನುವಾರುಗಳಿಗೆಮೇವುವಿತರಣೆಮಾಡಲಾಗುತ್ತಿದೆ.

# ಡ್ರೋಣ ಕ್ಯಾಮರಾದಲ್ಲಿ ಘಟಪ್ರಭಾ ನದಿಯ ಪ್ರವಾಹ ದೃಶ್ಯ



**ಮಹಾಲಿಂಗಪುರ :** ಸಮೀಪದ ಢವಳೇಶ್ವರ ಸೇತುವೆಯ ಹತ್ತಿರ ಘಟಪ್ರಭಾ ನದಿಯು ಒಂದು ಕೀಮಿಯಷ್ಟು ವಿಶಾಲವಾಗಿ ಮೈದುಂಬಿ ಹರಿಯುತ್ತಿರುವ ರಮನೀಯ ದೃಶ್ಯವನ್ನು ಚಿಮ್ಮಡದ ಛಾಯಾಗ್ರಾಹಕ ಅಮಜದಖಾನ ಇ.ಜಮಖಂಡಿ ಅವರು ತಮ್ಮ ಡ್ರೋಣ ಕ್ಯಾಮರಾದಲ್ಲಿ ಸೆರೆಹಿಡಿದಿದ್ದಾರೆ.

# ವಾರದ ಸಮಾರೋಪ: ದುರ್ಗಾದೇವಿಯ ಭಂಡಾರ ಜಾತ್ರೆ





**ಮಹಾಲಿಂಗಪುರ :** ವಾರದ ಸಮಾರೋಪ ನಿಮಿತ್ಯ ಶುಕ್ರವಾರ ಪಟ್ಟಣದ ದುರ್ಗಾದೇವಿಯ ಭಂಡಾರ ಜಾತ್ರಾ ಮಹೋತ್ಸವ ಸಂಭ್ರಮದಿಂದ ಜರುಗಿತು.

ಪಟ್ಟಣದಲ್ಲಿ ಮಳೆ–ಬೆಳೆ ಚೆನ್ನಾಗಿ ಬರಲಿ, ಊರಿಗೆ ಯಾವುದೇ ಸಾಂಕ್ರಾಮಿಕ ರೋಗ–ರುಜಿನುಗಳು ಬಾರದಿರಲಿ. ಪಟ್ಟಣದಲ್ಲಿ ವಾಸಿಸುವ ಜನತೆಯು ಸುಖ, ಸಂತೋಷ, ನೆಮ್ಮದಿಯಿಂದ ಬಾಳಲಿ ಎಂಬ ಉದ್ದೇಶದಿಂದ ಪ್ರತಿವರ್ಷ ನಾಗರ ಅಮವಾಸ್ಯೆಯ ಮುಂಚೆ ಆಚರಿಸುವ ವಿಶಿಷ್ಠ ಪದ್ದತಿಯೇ ವಾರದ ಆಚರಣೆಯಾಗಿದೆ.

ಮೂರು ಶುಕ್ರವಾರ, ಎರಡು ಮಂಗಳವಾರ ವಾರದ ವೃತ ಆಚರಿಸಿ ಊರ ಕಾಯುವ ದುರ್ಗಾದೇವಿ ಮತ್ತು ದ್ಯಾಮವ್ವ ದೇವಿಯ ಹೆಸರಿನಲ್ಲಿ ವಾರ ಹಿಡಿದು, ಈ ಐದು ದಿನಗಳಲ್ಲಿ ಮನೆಯಲ್ಲಿ ಯಾವುದೇ ರೀತಿಯ ವಗ್ಗರಣೆ ಹಾಕುವದು, ರೊಟ್ಟಿ ಮಾಡುವದು, ಕೆಲಸಕ್ಕೆ ಸ್ವಯಂ ಘೋಷಿತ ರಜೆ ಮಾಡುವದು, ಯುವಕರು ಶುಕ್ರವಾರ, ಮಂಗಳವಾರದ ಊರಲ್ಲಿನಲ್ಲಿ ಎಲ್ಲಾ ದೇವಸ್ಥಾನಗಳಿಗೆ ನೀರು ಹಾಕುವದು ಸೇರಿದಂತೆ ವೈಶಿಷ್ಟ್ಯಪೂರ್ನ ಆಚರಣೆಗಳನ್ನು ಶೃದ್ಧಾಭಕ್ತಿಯಿಂದ ಆಚರಿಸಿ 5ನೇ ವಾರದ ಶುಕ್ರವಾರ ದುರ್ಗಾದೇವಿ ಮತ್ತು ದ್ಯಾಮವ್ವ ದೇವಿಯ ಭಂಡಾರ ಜಾತ್ರೆಯನ್ನು ಆಚರಿಸುವ ಮೂಲಕ ವಾರದ ವೃತವನ್ನು ಸಮಾರೋಪ ಮಾಡಲಾಯಿತು.

**ಸಂಭ್ರಮದ ಮೆರವಣಿಗೆ :**

ಜಾತ್ರಾ ಮಹೋತ್ಸವದ ನಿಮಿತ್ಯ ದುರ್ಗಾದೇವಿ,ದ್ಯಾಮವ್ವ,ಮೆಲೆವ್ವ, ಯಲ್ಲಮ್ಮ, ಟೋಣಪಿನಾಥ, ಹನುಮಾನ ದೇವಸ್ಥಾನಗಳಲ್ಲಿ ವಿಶೇಷಪೂಜೆ ಸಲ್ಲಿಸಲಾಯಿತು. ಮಧ್ಯಾಹ್ನ 12 ರಿಂದ ಸಂಜೆ 4 ಘಂಟೆವರೆಗೆ ದುರ್ಗಾದೇವಿಯ ಭಾವಚಿತ್ರ ಮೆರವಣಿಗೆ ನಡೆಸಲಾಯಿತು. ಡೊಳ್ಳು ಕುಣಿತ, ಕರಡಿವಾದನ, ನಗಾರಿ, ಗೊಂಬೆ ಕುಣಿತದ ಕಲಾವಿದರು ಮೆರವಣಿಗೆಗೆ ಕಳೆಕಟ್ಟಿದರು. ಮೆರವಣಿಗೆಯಲ್ಲಿ ಸಾವಿರಾರು ಭಕ್ತರು ಪರಸ್ಪರ ಭಂಡಾರ ಎರಚಿಕೊಂಡು ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸಿದರು.

**ಪಾದುಕೆಗಳ ಮೆರವಣಿಗೆ :**

ಊರಿನಸಂಪ್ರದಾಯದಂತೆದುರ್ಗಾದೇವಿಯ ಮೆರವಣಿಗೆಯಲ್ಲಿ ವಿವಿಧ ದೇವಸ್ಥಾನಕ್ಕೆ ನೀಡುವ ಪಾದುಕೆಗಳ ಮೆರವಣಿಗೆ ನಡೆಸಿ, ಆಯಾ ದೇವಸ್ಥಾನಗಳಿಗೆ ಪಾದುಕಡಗಳನ್ನು ಮುಟ್ಟಿಸಲಾಯಿತು. ಊರಿನ ಸಾರ್ವಜನಿಕರು ದುರ್ಗದೇವಿಯಜಾತ್ರೆಯನಿಮಿತ್ಯ ಎಲ್ಲಾ ದೇವಸ್ಥಾನಗಳಿಗೆ ನೈವೈದ್ಯ, ಕಾಯಿ, ಕರ್ಪೂರ ಅರ್ಪಿಸಿದರು. ಸಂಜೆ 4ರಿಂದ ರಾತ್ರಿವರೆಗೆ ದುರ್ಗಾದೇವಿ ದೇವಸ್ಥಾನದಲ್ಲಿ ಅನ್ನಪ್ರಸಾದ ಜರುಗಿತು.

ದುರ್ಗಾದೇವಿ ದೇವಸ್ಥಾನದ ಅರ್ಚಕ ಮಹಾಲಿಂಗ ಪೂಜೇರಿ, ಹಿರಿಯರಾದ ನಾಗಪ್ಪ ಗೌಂಡಿ, ಅರ್ಜುನ ಆನೆಪ್ಪಗೋಳ, ಪ್ರಲ್ಹಾದ ಉತ್ತೂರ, ಸಂಜು ಕನಸಗೇರಿ, ಭೀಮಪ್ಪ ಕಿರಿಕಿರಿ ಸೇರಿದಂತೆ ಹಲವರು ಜಾತ್ರಾ ಮಹೋತ್ಸವದ ನೇತೃತ್ವವಹಿಸಿದ್ದರು.

# ಕರ್ನಾಟಕ ರಾಜ್ಯಕ್ಕೆ ಒಟ್ಟು 487.30 ಕೋಟಿ ರೂಪಾಯಿ ಮಂಜೂರು



**ಮೂಡಲಗಿ :** ಪ್ರಧಾನ ಮಂತ್ರಿ ಕಿಸಾನ್ ಸಂಪದ ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ ಒಟ್ಟು 487.30 ಕೋಟಿ ರೂಪಾಯಿ ಮಂಜೂರು ಮಾಡಲಾಗಿತ್ತು, ಅದರಲ್ಲಿ 353.56 ಕೋಟಿ ರೂಪಾಯಿ ಅನುದಾನವನ್ನು ಬಳಕೆ ಮಾಡಲಾಗಿದೆ ಎಂದು ಕೇಂದ್ರ ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವ ಚಿರಾಗ್ ಪಾಸ್ವಾನ್ ಅವರು ಲಿಖಿತ ರೂಪದಲ್ಲಿ ಮಾಹಿತಿ ನೀಡಿದ್ದಾರೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆಯುತ್ತಿರುವ ಮಳೆಗಾಲ ಅಧಿವೇಶದಲ್ಲಿ ಕರ್ನಾಟಕದಲ್ಲಿ ಆಹಾರ ಸಂಸ್ಕರಣಾ ವಲಯಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಪ್ರಧಾನ ಮಂತ್ರಿ ಕಿಸಾನ್ ಸಂಪದ ಯೋಜನೆಯಡಿ ಅನುಷ್ಠಾನಗೊಳಿಸಲಾದ ಯೋಜನೆಗಳ ಕುರಿತು ಈರಣ್ಣ ಕಡಾಡಿ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಇದು ದೇಶದಲ್ಲಿ ಆಹಾರ ಸಂಸ್ಕರಣಾ ಕ್ಷೇತ್ರದ ಬೆಳವಣಿಗೆಗೆ ದೊಡ್ಡ ಉತ್ತೇಜನವನ್ನು ನೀಡುವುದಲ್ಲದೆ ರೈತರಿಗೆ ಉತ್ತಮ ಆದಾಯವನ್ನು ಒದಗಿಸಲು ಸಹಾಯ ಮಾಡುತ್ತದೆ ಮತ್ತು ರೈತರ ಆದಾಯವನ್ನು ಹೆಚ್ಚಿಸುವ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮತ್ತು ಕೃಷಿ ವ್ಯರ್ಥವನ್ನು ಕಡಿಮೆ ಮಾಡುವಲ್ಲಿ ಒಂದು ದೊಡ್ಡ ಹೆಜ್ಜೆಯಾಗಿದೆ ಎಂದರು.

ಆಗ್ರೋ–ಪ್ರೊಸೆಸಿಂಗ್ ಕ್ಲಸ್ಟರ್‌ಗಳಿಗೆ ಮೂಲಸೌಕರ್ಯ ಯೋಜನೆ, ಆಹಾರ ಸಂಸ್ಕರಣೆ ಮತ್ತು ಸಂರಕ್ಷಣೆ ಸಾಮರ್ಥ್ಯಗಳ ರಚನೆ–ವಿಸ್ತರಣೆ ಯೋಜನೆ, ಬ್ಯಾಕ್‌ವರ್ಡ್ ಮತ್ತು ಫಾರ್ವರ್ಡ್ ಲಿಂಕ್‌ಗಳ ರಚನೆ ಯೋಜನೆ, ಮೆಗಾ ಫುಡ್ ಪಾರ್ಕ್ಸ್ ಯೋಜನೆ, ಆಪರೇಷನ್ ಗ್ರೀನ್ ಯೋಜನೆ, ಆಹಾರ ಪರೀಕ್ಷಾ ಪ್ರಯೋಗಾಲಯ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 30ನೇ ಜೂನ್ 2024 ರಂತೆ, ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮತ್ತು ಆದಾಯವನ್ನು ಹೆಚ್ಚಿಸುವ ಉದ್ದೇಶಗಳೊಂದಿಗೆ ಒಟ್ಟು 1680 ಆಹಾರ ಸಂಸ್ಕರಣಾಯೋಜನೆಗಳನ್ನುದೇಶಾದ್ಯಂತ ಅನುಮೋದಿಸಲಾಗಿದೆ. ಕರ್ನಾಟಕ ಸೇರಿದಂತೆ ಎಲ್ಲಾ ರಾಜ್ಯಗಳಿಗೆ 2017 ರಿಂದ 2024 ರವರೆಗೆ ಒಟ್ಟು 7458.81 ಕೋಟಿ ರೂಪಾಯಿ ಮಂಜೂರು ಮಾಡಲಾಗಿತ್ತು, ಅದರಲ್ಲಿ 4282.32 ಕೋಟಿ ರೂಪಾಯಿ ಅನುದಾನವನ್ನು ಬಳಕೆ ಮಾಡಲಾಗಿದೆ ಎಂದು ಸಚಿವರು ಉತ್ತರಿಸಿದ್ದಾರೆಂದು ತಿಳಿಸಿದ್ದಾರೆ.

# ಅಂಗನವಾಡಿ ಕಟ್ಟಡ ಕಾಮಗಾರಿಗೆ ಶಾಸಕ ಸವದಿ ಭೂಮಿ ಪೂಜೆ



**ಮಹಾಲಿಂಗಪುರ :** ಸ್ಥಳೀಯ ಬಳಗಾರ ಪ್ಲಾಟ್ ಮತ್ತು ಕೆಂಗೇರಿಮಡ್ಡಿ ಬಡಾವಣೆಯಲ್ಲಿ ತಲಾ 20 ಲಕ್ಷ ವೆಚ್ಚದ ಒಟ್ಟು 40 ಲಕ್ಷ ಅಂದಾಜು ವೆಚ್ಚದ ಎರಡು ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಸಿದ್ದು ಸವದಿ ಭೂಮಿ ಪೂಜೆ ನೆರವೇರಿಸಿದರು.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಸನಗೌಡ ಪಾಟೀಲ, ಮುಖಂಡರಾದ ಈರಪ್ಪ ದಿನ್ನಿಮನಿ, ಶೇಖರ ಅಂಗಡಿ, ಮಹಾಲಿಂಗಪ್ಪ ಕುಳ್ಳೊಳ್ಳಿ, ಜಿ.ಎಸ್. ಗೊಂಬಿ, ಡಾ.ಅಶೋಕ ದಿನ್ನಿಮನಿ, ಚನ್ನಪ್ಪ ರಾಮೋಜಿ, ಬಸವರಾಜ ಯರಗಟ್ಟಿ, ಚನ್ನಪ್ಪ ಪಟ್ಟಣಶೆಟ್ಟಿ, ಶಂಕರಗೌಡ ಪಾಟೀಲ, ಲಕ್ಕಪ್ಪ ಚಮಕೇರಿ, ತಿಪ್ಪಣ್ಣ ಬಂಡಿವಡ್ಡರ,

ವಿಷ್ಣುಗೌಡ ಪಾಟೀಲ, ಗುರುಪಾದ ಅಂಬಿ, ಹರೀಶ ನಾಯಕ, ವಿಜಯಕುಮಾರ ಸಬಕಾಳೆ, ಮಹಾಲಿಂಗ ಶಿವಣಗಿ, ನಾಗಲಿಂಗ ಬಡಿಗೇರ, ಅಂಬರೀಶ ಕನ್ನಾಳ, ಶಿವನಗೌಡ ಪಾಟೀಲ, ಬಸವರಾಜ ಮಡಿವಾಳ, ವೀರೇಶ ಮುಂಡಗನೂರ, ಮಹೇಶ ಜಿಡ್ಡಿಮನಿ ಸೇರಿದಂತೆ ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

# ಶಾಸಕಾಂಗ ಉಪನಾಯಕ ಬೆಲ್ಲದರಿಂದ ಪ್ರವಾಹ ವಿಕ್ಷಣೆ



**ಜಮಖಂಡಿ :** ತಾಲೂಕಿನಲ್ಲಿ ಕೃಷ್ಣಾನದಿ ಪ್ರವಾಹದಿಂದ ನಲುಗಿರುವ ಗ್ರಾಮಗಳಿಗೆ ಹುಬ್ಬಳ್ಳಿ-ದಾರವಾಡ ಪಶ್ಚಿಮ ವಿಧಾನಸಭಾ ಕ್ಷೇತ್ರದ ಶಾಸಕ, ಬಿಜೆಪಿ ಪಕ್ಷದ ಶಾಸಕಾಂಗ ಉಪನಾಯಕರಾದ ಅರವಿಂದ ಬೆಲ್ಲದ, ಸಂಸದ ಪಿ.ಸಿ. ಗದ್ದಿಗೌಡರ ಪ್ರವಾಹ ವಿಕ್ಷಣೆ ಮಾಡಿದರು.

ಪ್ರವಾಹ ಪೀಡಿತ ಪ್ರದೇಶಗಳಾದ ಆಲಗೂರ ಮತ್ತು ಕಡಕೋಳ ಗ್ರಾಮದಲ್ಲಿ ಪ್ರವಾಹದಲ್ಲಿ ಮೃತರ ಕುಟುಂಬಗಳಿಗೆ ಸಾಂತ್ವನ ಹೇಳುವ ಮೂಲಕ ಸರಕಾರದಿಂದ ನೀಡಲಾದ ತಲಾ 5 ಲಕ್ಷ ಮೊತ್ತದ ಸ್ವೀಕೃತಿ ಪತ್ರವನ್ನು ವಿತರಿಸಿದರು.

ಇದೆ ಸಂದರ್ಭದಲ್ಲಿ ಶಾಸಕ ಜಗದೀಶ ಗುಡಗುಂಟಿ, ಮಾಜಿ ವಿಪ ಸದಸ್ಯ ಜಿ.ಎಸ್.ನ್ಯಾಮಗೌಡ, ವಿಭಾಗ ಸಹ ಪ್ರಭಾರಿ ಬಸವರಾಜ ಯಂಕಂಚಿ, ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಟಿ. ಉಪಾಧ್ಯೆ, ಸತ್ಯನಾರಾಯಣ ಹೇಮಾದ್ರಿ, ಹಣಮಂತ ಮಾವಿನಮರದ, ಚನಬಸಪ್ಪ ಕತಾಟೆ, ಸುಭಾಷ ಲಗಳಿ, ಅಜಯ ಕಡಪಟ್ಟಿ, ಅರವಿಂದಗೌಡ ಪಾಟೀಲ ಸಹಿತ ಹಲವರು ಇದ್ದರು.

# ಬುಜ್ಜಿಭೀಮ ಹೆಸರಿನ ಕೋಣಕ್ಕೆ 3ನೇ ವರ್ಷದ ಹುಟ್ಟುಹಬ್ಬದ ಸಂಭ್ರಮ!

**ಮಹಾಲಿಂಗಪುರ :** ಪಟ್ಟಣದ ಹೊರವಲಯದಲ್ಲಿನ ರನ್ನಬೆಳಗಲಿ ಸರಹದ್ದಿನಲ್ಲಿರುವ ಸಿದ್ದು ಮಹಾದೇವ ಧರಿಗೌಡರ ಕೇವಲ ಎರಡುವರೆ ಎಕರೆ ಜಮೀನು ಹೊಂದಿದ ಸಾಮಾನ್ಯ ರೈತನಾಗಿದ್ದು. ಇವರು ಎರಡು ಸಾಮಾನ್ಯ ಎಮ್ಮೆಗಳು, ಕರುಗಳು, ಆಡುಗಳ ಜೊತೆಗೆ ಮನೆಯಲ್ಲಿಯೇ ಹುಟ್ಟಿದ ಗುಜರಾತಿನ ಮುರ್ರಾ ತಳಿಯ ಕೋಣವನ್ನು ಮನೆಯ ಮಗನಂತೆ ಕಾಳಜಿವಹಿಸಿ ಬೆಳೆಸಿ ಸಾಕುತ್ತಿರುವದು ವಿಶೇಷ. ಇವರ ಸಹೋದರ, ಖಾಸಗಿ ಬ್ಯಾಂಕ ಉದ್ಯೋಗಿ ಶ್ರೀಶೈಲ ಧರಿಗೌಡರ ಇವರ ಜಾನುವಾರು ಪ್ರೀತಿಗೆ ಬೆಂಬಲವಾಗಿ ನಿಂತಿದ್ದಾರೆ.

**ಕೋಣಕ್ಕೂ ಬರ್ತಡೇ ಭಾಗ್ಯ :** ಸಿದ್ದು ಅವರು ಸಾಕಿದ ಕೋಣಕ್ಕೆ ರವಿವಾರ ಎರಡನೇ ವರ್ಷದ ಹುಟ್ಟು ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಮನೆಯ ಎಮ್ಮೆ ಹಾಕಿದ ಗಂಡು ಕರುವನ್ನು ಪ್ರೀತಿಯಿಂದ ಮನೆಯ ಸದಸ್ಯನಂತೆ ಸಾಕಿದ್ದಾರೆ. ಅದಕ್ಕೆ ಬುಜ್ಜಿ ಮತ್ತು ಭೀಮ ಎಂಬ ಹೆಸರಿಟ್ಟಿದ್ದಾರೆ.



ಮೂರು ವರ್ಷ ತುಂಬಿದ ಬುಜ್ಜಿಗೆ ಸಂಭ್ರಮದಿಂದ ಕೇಕ್ ಕತ್ತರಿಸಿ ಜನ್ಮದಿನ ಆಚರಿಸಿದರು. ಸಾಮಾನ್ಯ ಕೋಣ 5-6 ವರ್ಷದ ನಂತರ ಯಾವ ಗಾತ್ರ ಬೆಳೆಯುತ್ತದೆಯೋ ಆ ಗಾತ್ರದಷ್ಟು ಮೂರೇ ವರ್ಷದಲ್ಲಿ ಬೆಳೆದಿರುವುದು ವಿಶೇಷ.

**3 ಲಕ್ಷಕ್ಕೂ ಅಧಿಕ ಬೇಡಿಕೆ :** ಈ ಅಜಾನುಬಾಹು ಕೋಣವನ್ನು ಕೆಲವರು ಈಗಾಗಲೇ 3 ಲಕ್ಷ ರೂ. ಬೆಲೆ ಕಟ್ಟಿ ಖರೀದಿಸಲು ಕೇಳಿದ್ದಾರೆ. ಆದರೂ ಸಿದ್ದು ಇದನ್ನು ಮಾರಿಲ್ಲ. ನಮಗೆ ಲಾಭದ ಉದ್ದೇಶವಿಲ್ಲ, ಬಹಳ ಪ್ರೀತಿಯಿಂದ ಸಾಕುತ್ತಿದ್ದೇವೆ. ಸದ್ಯಕ್ಕೆ ಮಾರಾಟ ಮಾಡುವದಿಲ್ಲ. ಮೊದಲಿನಿಂದಲೂ ಜಾನುವಾರುಗಳೆಂದರೆ ಹೆಚ್ಚು ಪ್ರೀತಿ, ನಾವು ಅವುಗಳನ್ನು ಸಾಕುತ್ತೇವೆ ಎನ್ನುವುದಕ್ಕಿಂತ ಅವುಗಳೇ ನಮಗೆ ಲಾಭದಾಯಕ ಜೀವಿಗಳು. ಆದ್ದರಿಂದ ಈ ಕೋಣಕ್ಕೆ ಸಾತ್ವಿಕ ಆಹಾರ ತಿನ್ನಿಸಿ ಅಜಾನುಬಾಹುವಾಗಿ ಬೆಳೆಸಿದ್ದೇನೆ. ನೋಡಲು ದೊಡ್ಡ ಗಾತ್ರವಿದ್ದರೂ ಯಾರನ್ನೂ ಹಾಯಿವುದಿಲ್ಲ, ಅದರ ಮಾನವೀಯ ಗುಣ ನೋಡಿ ನಮಗೂ ಪ್ರೀತಿ ಹೆಚ್ಚಾಗಿ ನಮ್ಮಂತೆ ಅದಕ್ಕೂ ಕಳೆದ ಮೂರು ವರ್ಷಗಳಿಂದ ಮಾಡಿ ಕೇಕ್ ಕಟ್ ಮಾಡಿ, ಹುಟ್ಟುಹಬ್ಬ ಆಚರಿಸುತ್ತಿದ್ದೇವೆ ಎನ್ನುತ್ತಾರೆ ರೈತ ಸಿದ್ದು ಮಹಾದೇವ ಧರಿಗೌಡರ.

# ವಿದ್ಯಾರ್ಥಿಗಳಿಂದ ಶ್ರೀರಾಮಪಾದಕ ಪಟ್ಟಾಭಿಷೇಕ ನಾಟಕ ಪ್ರದರ್ಶನ



**ಜಮಖಂಡಿ :** ನಗರದ ಮುರಗೋಡ ಕಲ್ಯಾಣಮಂಟಪದಲ್ಲಿ ಸ್ಥಳೀಯ ತುಂಗಳ ಪದವಿಪೂರ್ವ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಶ್ರೀರಾಮಪಾದಕ ಪಟ್ಟಾಭಿಷೇಕ ನಾಟಕ ಪ್ರದರ್ಶಿಸಿದರು. ದಶರಥ ಮಹಾರಾಜರು ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕ ಮಾಡಬೇಕೆಂದು ನಿರ್ಧರಿಸುವ ಸಂದರ್ಭದಿಂದ 12 ವರ್ಷ ವನವಾಸ ಸಹಿತ ಭರತಕುಮಾರ ಚಾಚು ತಪ್ಪದೇ ಮಂತ್ರಿಗಳಾದ ಸುಮಂತ ಮುನಿಗಳಾದ ವಶಿಷ್ಠರು ಭರತ ಕುಮಾರನ ಬೆನ್ನಿಗೆನಿಂತು ರಾಜ್ಯ ನಡೆಸುವ ಅನಿಯಾಗುವ ದೃಶ್ಯಗಳ ಸಹಿತ ಶ್ರೀರಾಮಚಂದ್ರಪಾದಕ ಪಟ್ಟಾಭಿಷೇಕ ಸುಖಾಂತ್ಯವಾಗುವ ನಾಟಕವನ್ನು ವಿದ್ಯಾರ್ಥಿಗಳ ಪ್ರದರ್ಶಿಸಿದರು. ವಿದ್ಯಾರ್ಥಿಗಳಿಂದ ನೃತ್ಯ, ಸಂಗೀತ, ಕಾರ್ಯಕ್ರಮ ನಡೆಯಿತು.

ಸಂಸ್ಥೆ ಸಂಸ್ಥಾಪಕ ಅಶೋಕ ತುಂಗಳ, ಡಾ.ಲಕ್ಷ್ಮಿ ತುಂಗಳ ಕಾರ್ಯಕ್ರಮ ಉದ್ದೇಶಿಸಿ ನಾಡಿನ ಸಂಸ್ಕೃತಿ ಕುರಿತು ಮಾತನಾಡಿದರು. ಪ್ರಾಚಾರ್ಯರಾದ ಎ.ಎಸ್.ಜಾಗೀರದಾರ, ವಿ.ಎಸ್.ಕುಲಕರ್ಣಿ ಇದ್ದರು. ಹೆಚ್.ಸಿ.ಚಲವಾದಿ ನಾಟಕ ನಿರ್ದೇಶನ ಮಾಡಿದರು. ಸಂಗೀತ ಶಿಕ್ಷಕರಾದ ರವಿಕುಮಾರ ಬೆಣ್ಣಿ, ತಬಲಾ ಶಿಕ್ಷಕ ಹನುಮಂತ ಅಂಕದ ಇದ್ದರು.

# ಮನೆಯಲ್ಲಿ ಮಹಾಮನೆಯ 15ನೇ ವಾರ್ಷಿಕೋತ್ಸವ

**ಮಹಾಲಿಂಗಪುರ :** ಸ್ಥಳೀಯ ಬಸವ ಬಳಗ ಹಾಗೂ ವಚನ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಮಹಾಮನೆಯ 15 ನೇ ವಾರ್ಷಿಕೋತ್ಸವ ಆಚರಿಸಲಾಯಿತು.

ಶಿವಪ್ಪ ಮಹಾಲಿಂಗಪ್ಪ ಶಿರೋಳ ತೋಟದ ಮನೆಯಲ್ಲಿ ಹಮ್ಮಿಕೊಂಡಿದ್ದ 180 ನೇ ತಿಂಗಳ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಶಿಬಾಯಿ ಪುರಾಣಿಕ ಮಾತನಾಡಿ, ಶರಣರ ಬದುಕು, ನಡೆನುಡಿ, ಕಾಯಕ ಕುರಿತು ವಿವರಿಸಿದರು.



ಮುಖಂಡ ಜಿ.ಎಸ್.ಗೊಂಬಿ ವಚನ ಪಿತಾಮಹ ಫ.ಗು.ಹಳಕಟ್ಟಿ ಕುರಿತು ಉಪನ್ಯಾಸ ನೀಡಿದರು. ಶಿಕ್ಷಕರಾದ ಎ.ಎ.ಕಿಚಡಿ, ದಾಕ್ಷಾಯಣಿ ಮಂಡಿ, ಭಾಗ್ಯಶ್ರೀ ಕೋಟಿ, ಸಪ್ನಾ ಅನಿಗೋಳ ಶರಣರ ಕುರಿತ ವಚನಗಳ ಚಿಂತನ ಮಾಡಿದರು.

ಶಿರೋಳ ಅಡಿವೆಪ್ಪ ಮಹಾರಾಜರು ಸಾನಿಧ್ಯ ವಹಿಸಿದ್ದರು. ಬಸವ ಬಳಗದ ಶ್ರೀಶೈಲಪ್ಪ ಉಳೇಗಡ್ಡಿ, ಗೋಲೇಶ ಅಮ್ಮಣಗಿ,
ಅಣ್ಣಾಜಿ ಫಡತಾರೆ, ಚಂದ್ರು ಗೊಂದಿ, ಎ.ಬಿ.ಗೌಡಪ್ಪನವರ, ಎಂ.ಆರ್.ಬಿದರಿ ಇತರರಿದ್ದರು.

ಬಸವ ಬಳಗದ ಸಂಚಾಲಕ ಬಸವರಾಜ ಮೇಟಿ ಪ್ರಾರ್ಥಿಸಿ, ನಿರೂಪಿಸಿದರು.ಗಿರೀಶ ಶಿರೋಳ ವಂದಿಸಿದರು.

# ಲಯನ್ಸ್ ನಿರ್ದೇಶಕರ ಸಭೆಯಲ್ಲಿ ವೈದ್ಯರ ದಿನಾಚರಣೆ ಆಚರಣೆ

**ಜಮಖಂಡಿ :** ನಗರದ ಕುಡುಚಿ ರಸ್ತೆಯಲ್ಲಿರುವ ಅನ್ನಪೂರ್ಣೇಶ್ವರಿ ಹೋಟೆಲ್ ಸಭಾಂಗಣದಲ್ಲಿ ಲಯನ್ಸ್ ಸಂಸ್ಥೆ ಪ್ರಥಮ ನಿರ್ದೇಶಕರ ಮಂಡಳಿ ಸಭೆಯಲ್ಲಿ ವೈದ್ಯರ ದಿನಾಚರಣೆ ಆಚರಿಸಲಾಯಿತು.

ವೈದ್ಯಕೀಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ಹಿರಿಯ ವೈದ್ಯ ಡಾ.ರಾಮಪ್ಪಾ ಮೆಟಗುಡ, ಡಾ.ಮಹಾನಂದೇಶ ದೇಸಾಯಿ, ಡಾ.ಸುಧೀರ ಪರಾಂಜಪೆ, ಡಾ.ಗೋಪಾಲಕೃಷ್ಣ ಹವಾಲ್ದಾರ, ಅವರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದ;;ಒ ಜೋನ ಚೇಯರ ಪರ್ಸನ ರಾಜಶೇಖರ ಅಕ್ಕಿ,, ಲಯನ್ಸ ಸಂಸ್ಥೆ ಅಧ್ಯಕ್ಷ ಚಿನ್ಮಯ ಜಿರಲಿ, ಕಾರ್ಯದರ್ಶಿ ಪ್ರವೀಣ ಮೈಗೂರ, ಖಜಾಂಚಿ ಸುನೀಲ ಮುರುಗೋಡ, ಹೃದಯರೋಗತಜ್ಞ ಡಾ.ಎಚ್.ಜಿ.ದಡ್ಡಿ, ಡಾ. ರಂಗನಾಥ ಸೋನವಾಲ್ಕರ, ಅಪ್ಪಾಸಾಹೇಬ ಜನಗೌಡ ಸಹಿತ ಹಲವರು ಇದ್ದರು.



### ಬಿಜೆಪಿ ಪಕ್ಷದ ನಗರ ಹಾಗೂ ಗ್ರಾಮೀಣ ಮಂಡಲದ ಕಾರ್ಯಕಾರಣಿ ಸಭೆ | ಅಭಿವೃದ್ಧಿ ಶೂನ್ಯ - ಹಗರಣಗಳ ಕಾಂಗ್ರೆಸ್ ಸರ್ಕಾರವನ್ನು ತೊಲಗಿಸಲು ಕರೆ

# ರಾಜ್ಯದಲ್ಲಿ ಆಡಳಿತದ ಹಳಿ ತಪ್ಪಿದ ಕಾಂಗ್ರೆಸ್ಸ ಸರಕಾರ: ಚರಂತಿಮಠ

**ಬಾಗಲಕೊಟೆ:** ಅಭಿವೃದ್ಧಿ ಶೂನ್ಯ, ಬರಿ ಹಗರಣಗಳು, ಕುರ್ಚಿಗಾಗಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಚಿವರುಗಳ ನಡುವೆ ಅಧಿಕಾರಕ್ಕಾಗಿ ತೀವ್ರ ಪೈಪೋಟಿಯಿಂದಾಗಿ ಇಂದು ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಆಡಳಿತ ಹಳಿ ತಪ್ಪಿದೆ ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ಬಿ.ವಿ.ವಿ.ಸಂಘದ ಮಿನಿ ಸಭಾಭವನದಲ್ಲಿ ಬುಧವಾರ ಇದೆ ಮೊದಲ ಬಾರಿಗೆ ನಡೆದ ಭಾರತೀಯ ಜನತಾ ಪಾರ್ಟಿಯ, ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ನಗರ ಹಾಗೂ ಗ್ರಾಮೀಣ ಮಂಡಲದ ಕಾರ್ಯಕಾರಣಿ ಸಭೆಯಲ್ಲಿ ಮಾತನಾಡಿದರು. ನಗರಸಭೆ ಹಾಗೂ ನಗರೋತ್ಥಾನದಲ್ಲಿ ಕೇಂದ್ರ ಸರಕಾರದ ಯೋಜನೆಗಳು. ಅವುಗಳಿಂದ ಬಂದ ಅನುದಾನದಿಂದ ಮಾತ್ರ ಇಂದು ಕೆಲಸಗಳು ನಡೆಯುತ್ತಿವೆ. ಅಭಿವೃದ್ಧಿಗಾಗಿ ರಾಜ್ಯ ಸರಕಾರ ಯಾವುದೆ ಹಣ ಬಿಡುಗಡೆಮಾಡಿಲ್ಲಾ. ಅಭಿವೃದ್ಧಿ ಶೂನ್ಯ ಸರಕಾರವಾಗಿದ್ದು, ಕಳೆದ 13 ತಿಂಗಳಿಂದ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ಸ ಸರಕಾರ ಸಂಪೂರ್ಣ ಅಭಿವೃದ್ಧಿ ಶೂನ್ಯವಾಗಿ ವೈಫಲ್ಯವನ್ನು ಕಂಡಿದೆ. ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು



2ಲಕ್ಷ ಕೋಟಿ ಹೊಸ ಸಾಲ ಮಾಡಿದರೂ ಕೂಡಾ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲಾ, ಅಲ್ಲದೇ ಬಿ.ಜೆ.ಪಿ ಸರಕಾರ ತಂದಿದ್ದ ಹೊಸ ಯೋಜನೆಗಳ ಯಶಸ್ವಿ ಕಾರ್ಯಕ್ರಮಗಳನ್ನು ಸ್ಥಗಿತಗೊಳಿದ್ದಾರೆ. ಅಲ್ಲದೆ ರಾಜ್ಯದಲ್ಲಿ ಬೆಲೆ ಏರಿಕೆಯ ಪರ್ವವನ್ನೇ ಆರಂಭಿಸಿದೆ. ತಿವ್ರ ಹದಗೆಟ್ಟ ಕಾನೂನು-ವ್ಯವಸ್ಥೆ, ಎಸ್.ಸಿ, ಎಸ್.ಟಿ ಹಿಂದುಳಿದ ವರ್ಗಗಳ ಅಭಿವೃದ್ಧಿಯ ಕಡೆಗಣನೆ, ಅಧಿಕಾರ ದುರ್ಬಳಕೆ, ನಿವೇಶ ಹಗರಣ ಸೇರಿದಂತೆ ಅನೇಕ ಹಗರಣಗಳಲ್ಲಿ ಸರಕಾರ ಭಾಗಿಯಾಗಿದೆ. ಈ ಭ್ರಷ್ಟ ಸರ್ಕಾರ ತೊಲಗುವವರೆಗೆ ವಿರಮಿಸದೆ ಭಾರಿ ಜನಾಂದೋಲಕ್ಕೆ ಕಾರ್ಯಕರ್ತರು ಸಿದ್ದರಾಗಬೇಕು ಎಂದರು. ಬೆಳಗಾವಿ ವಿಭಾಗಿಯ ಸಹ ಪ್ರಭಾರಿ ಬಸವರಾಜ ಯಂಕಂಚಿ ಪಕ್ಷ ಸಂಘಟನೆ ಬಗ್ಗೆ ಮಾಹಿತಿ ನೀಡಿದರು.

ಇದೆ ಸಂದರ್ಭದಲ್ಲಿ ಸಭೆಯಲ್ಲಿ ವಿವಿಧ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು, ಖಂ ಡನಾ ನಿರ್ಣಯ :ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ ರಾಜ್ಯ ಸರಕಾರದ ಹಗರಣಗಳ ಹಾಗೂ ಶೂನ್ಯ ಅಭಿವೃದ್ಧಿ ಬಗ್ಗೆ ಖಂಡನಾ ನಿರ್ಣಯ ಮಂಡಿಸಿದರು, ರಾಜು ಮುದೇನೂರ ಖಂಡನಾ ನಿರ್ಣಯವನ್ನು ಅನುಮೋದಿಸಿದರು.

ಅಭಿನಂದನಾ ನಿರ್ಣಯ: ಜಿಲ್ಲಾ ವಕ್ತಾರ ಸತ್ಯನಾರಾಯಣ ಹೇಮಾದ್ರಿ ಸತತ ಮೂರನೇ ಬಾರಿಗೆ ದೇಶದ ಪ್ರಧಾನ ಮಂತ್ರಿಗಳಾಗಿ ಪ್ರಮಾಣ ವಚನ ಸ್ವಿಕ-ರಿಸಿದ ನರೇಂದ್ರ ಮೋದಿಜಿಯವರಿಗೆ ಅಭಿನಂದನಾ ನಿರ್ಣಯ ಮಂಡಿಸಿದರು, ಇದನ್ನು ಶಿವಾನಂದ ಟವಳಿ ಅನುಮೋದಿಸಿದರು. ಹಾಗೂ ಇವೆರಡು ನಿರ್ಣಯ ಅನುಮೋದನೆಗೆ ಗ್ರಾಮೀಣ ಹಾಗೂ ನಗರ ಮಂಡಳ ಅಧ್ಯಕ್ಷರು ಓಂಕಾರ ಹೇಳುವ ಮೂಲಕ ಸಮ್ಮತಿ ಸೂಚಿದರು. ನಗರಮಂಡಲ ಅಧ್ಯಕ್ಷ ಬಸವರಾಜ ಹುನಗುಂದ ಪಕ್ಷ ಸಂಘಟನೆ ಹಾಗೂ ಕಾರ್ಯಚಟುವಟಿಕೆಗಳ ವರದಿ ವಾಚನ ಮಾಡಿದರು,

ಸಭೆಯಲ್ಲಿ ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೊಣ್ಣುರ, ಜಿಲ್ಲಾ ಉಪಾಧ್ಯಕ್ಷರಾದ ಲಕ್ಷ್ಮೀ ನಾರಾಯಣ ಕಾಸಟ್,ಭಾಗೀರಥಿ ಪಾಟೀಲ, ರಂಗನಗೌಡ ಗೌಡರ.ಸಂಗಣ್ಣ ಕಲಾದಗಿ, ಗುಂಡುರಾವ ಶಿಂದೆ, ಶಿವಾನಂದ ಕೊಣ್ಣುರ, ದ್ಯಾವಪ್ಪ ರಾಕುಂಪಿ, ರಾಮಣ್ಣ ಜುಮನಾಳ, ರಾಜು ಶಿಂತ್ರೆ, ಪುಂಡಲಿಕ್ಕಪ್ಪ ಮೂಲಿನಮನಿ, ಸದಾನಂದ ನಾರಾ, ಬಸವರಾಜ ಅವರಾಧಿ, ಅನಿತಾ ಸರೋದೆ, ಭಾರತಿ ಪಾಟೀಲ, ಸವಿತಾ ಲಂಕೆನ್ನವರ, ರಾಧಾ ಆಕಳವಾಡಿ, ಉಮೇಶ ಹಂಚಿನಾಳ, ಶ್ರೀಧರ ನಾಗರಬೆಟ್ಟ,ಸೋಮಸಿಂಗ ಲಮಾಣಿ, ಪ್ರದೀಪ ಗೌಡರ ಮಲ್ಲೇಶ ವಿಜಾಪುರ, ಕಲ್ಲಪ್ಪ ಭಗವತಿ ಸೇರಿದಂತೆ ಗ್ರಾಮೀಣ ಭಾಗದ ಪದಾಧಿಕಾರಿಗಳು ಭಾಗವಹಿಸಿದ್ದರು.

# ಬರಕತಲಿ ಮುಲ್ಲಾರಿಂದ 23ನೇ ವಾರ್ಡಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



**ಗದಗ:** ಅವಳಿ ನಗರವಾದ ಗದಗ ಬೆಟಗೇರಿ ನಗರಸಭಾ ವ್ಯಾಪ್ತಿಯಲ್ಲಿ ಬರುವ 23 ನೇ ವಾರ್ಡಿನ ಜನಪ್ರೀಯ ಸದಸ್ಯರಾದ ಜನಾಬ ಬರಕತಲಿ ಮುಲ್ಲಾ ರವರು ವಾರ್ಡಿನ ಒಕ್ಕಲಗೇರಿ ಓಣಿಯ ಗೆಳೆಯರ ಬಳಗದ ರಸ್ತೆಯಿಂದ ಗಣಪತಿ ದೇವಸ್ಥಾನದ ವರೆಗೆ ಸಿ ಸಿ ರಸ್ತೆ ನಿರ್ಮಾಣ ಕಾಮಗಾರಿ ಹಾಗೂ ಬಡಾವಣೆಯ ಗುಜಮಾಗಡಿಯವರ ಮನೆಯವರೆಗಿನ ರಸ್ತೆಗಳಿಗೆ ಫೇವರೇಜ್ ಅಳವಡಿಕೆ ಮತ್ತು ಮುತ್ತಣ್ಣ ರೋಣದ ರವರ ಮನೆಯ ರಸ್ತೆಗಳಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಫೆವರ್ಸ್ ಅಳವಡಿಕೆ ಕಾಮಗಾರಿಗಳಿಗೆ ನಗರಸಭೆಯ ವಿರೋಧ ಪಕ್ಷದ ಉಪ ನಾಯಕರು ಹಾಗೂ ವಾರ್ಡಿನ ಜನಸ್ನೇಹಿ ಸದಸ್ಯರಾದ ಜನಾಬ್ ಬರಕತಲಿ ಮುಲ್ಲಾ ರವರು ಭೂಮಿ ಪೂಜೆ ಮಾಡುವ ಮೂಲಕ ಚಾಲನೆ ನೀಡಿದರು. ಈ ಸಂಧರ್ಭದಲ್ಲಿ ಒಕ್ಕಲಗೇರಿ ಓಣಿಯ ಹಿರಿಯರಾದ ನಾಗಪ್ಪ ಗುಗ್ಗರಿ, ಮುತ್ತಣ್ಣ ರೋಣದ, ಚಂದ್ರಶೇಖರಪ್ಪ ಪುರದ,ಬಸವರಾಜ ಹತ್ತಿಶೆಟ್ಟರ, ಕಾಂಗ್ರೇಸ್ ಮುಖಂಡರಾದ ಜನಾಬ ಎಚ್ ಕೆ ಮುಲ್ಲಾ, ಜಗದಾಳ ಗೌಡರ, ಮಂಜುನಾಥ ನಲವಡಿ, ಖಾದರ ಕಿರೆಸೂರ. ಆಸಿಫ್ ಅಲಿ ಮುಲ್ಲಾ, ಎಮ್ ಎಮ್ ಕಾಗದಗಾರ, ಶಂಕರಪ್ಪ ಸತ್ಯಪ್ಪನವರ, ಪ್ರಕಾಶ ಕಂಠೀ, ಹನಮಂತಪ್ಪ ಜಕ್ಕಲಿ, ಸಿದ್ದಲಿಂಗಪ್ಪ ತುರಕಾಣಿ, ಶೇಕಪ್ಪ ತುಪ್ಪದ,ದಾವೂದ ಡೋಲಿ, ಈಶ್ವರಪ್ಪ ಕ್ಯಾಡದ, ಮದಿವಾಳಪ್ಪ ಕಮತರ, ಸತೀಶ ತಡಸದ, ಗೋವಿಂದಪ್ಪ ನಾಗರಾಳ, ಜಗದೀಶ ಸೂರಪ್ಪಗೌಡರ, ಮಹಾಂತೇಶ ನಾಗರಾಳ ಹಾಗೂ ಮತ್ತಿತರೇ ಸಮಸ್ತ ಬಡಾವಣೆಯ ನಾಗರಿಕರು ಉಪಸ್ಥಿತರಿದ್ದರು.

# ರಾಜ್ಯ ಮಟ್ಟದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸ್ಪರ್ಧೆ

## ಹಿಂದೂಸ್ತಾನಿ ಸಂಗೀತ ಕ್ಷೇತ್ರಕ್ಕೆ ಹಲವಾರು ನಕ್ಷತ್ರಗಳನ್ನು ನೀಡಿದ ಹೆಮ್ಮೆ ಬಾಗಲಕೋಟೆಗಿದೆ: ಪ್ರಭುಸ್ವಾಮಿಗಳು

**ಬಾಗಲಕೋಟೆ :** ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರಕ್ಕೆ ಹಲವಾರು ನಕ್ಷತ್ರಗಳನ್ನು ನೀಡಿದ ಹೆಮ್ಮೆ ಬಾಗಲಕೋಟೆ ಜಿಲ್ಲೆಗೆ ಇದೆ ಎಂದು ಚರಂತಿಮಠದ ಪರಮಪೂಜ್ಯರಾದ ಪ್ರಭು ಸ್ವಾಮಿಗಳು ಚರಂತಿಮಠ ಹೇಳಿದರು.

ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಸಮಿತಿ ಹಾಗೂ ಸಂಗೀತ ವಿಭಾಗದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸ್ಪರ್ಧೆ ಕಾರ್ಯಕ್ರಮವನ್ನು ವೀಣೆಯನ್ನು ನುಡಿಸುವಮೂಲಕಉದ್ಘಾಟಿಸಿಮಾತನಾಡಿ ಅವರು ಡಾ.ಮಲ್ಲಿಕಾರ್ಜುನ ಮನ್ಸೂರ ಅವರು ಸಂಗೀತ ಕ್ಷೇತ್ರಕ್ಕೆ ಹೋಗಿದ್ದು ಬಾಗಲಕೋಟೆಯ ರಂಗಭೂಮಿಯಿಂದ, ಗಾನಯೋಗಿ ಪಂಚಾಕ್ಷರಿ ಗವಾಯಿಗಳಿಗೆ "ಗವಾಯಿ" ಎಂದು ಬಿರುದು ನೀಡಿದ್ದು ಇದೇ ಬಾಗಲಕೋಟೆ, ಅಮೀರಬಾಯಿ ಕರ್ನಾಟಕಿ ಹಾಗೂ ಘೋರಬಾಯಿ ಕರ್ನಾಟಕಿ, ಪ್ಯಾರಾಭಾಯಿ ಬೀಳಗಿ, ಸಗುಣಾಬಾಯಿ ಚಂದಾವರಕರ, ಬೇವೂರ ಬಾದಶಾ, ಉತ್ತರ ಕರ್ನಾಟಕ್ಕೆ ಸೀತಾರವಾದನವನ್ನು ಪರಿಚಯಿಸಿದವರಲ್ಲಿ ಮುರನಾಳ ಮಳೆರಾಜೇಂದ್ರಸ್ವಾಮಿ ಮಠ ಗಂಗಾಧರಸ್ವಾಮಿಗಳು, ಸೇರಿದಂತೆ ಹಿಂದೂಸ್ತಾನಿ ಸಂಗೀತ ಕ್ಷೇತ್ರಕ್ಕೆ ನೂರಾರು ಕಲಾವಿದರನ್ನು ಕೊಡುಗೆಯಾಗಿ ಕೊಟ್ಟಿರುವ ಹೆಮ್ಮೆ ಬಾಗಲಕೋಟೆ ಜಿಲ್ಲಿಗೆ ಇದೆ, ಜೊತೆಗೆ ಬಸವೇಶ್ವರ ಕಲಾ ಮಹಾವಿದ್ಯಾಲಯ ಸಂಗೀತ ವಿಭಾಗ ರಾಜ್ಯ ಹಾಗೂ ರಾಷ್ಟ್ರಕ್ಕೆ ಅನೇಕ ಕಲಾವಿದರನ್ನು ಪರಿಚಯಿಸಿದೆ, ಸಂಗೀತ ಎಲ್ಲರ ಮನಸ್ಸುಗಳನ್ನು ಒಂದಡೆ ಕಸೇಳೆಯುವ ಶಕ್ತಿ ಇದ್ದು, ಮನ ತಣಿಸಿ ಅನುರಂಜಿಸುವ ಶಕ್ತಿ ಸಂಗೀತಕ್ಕೆ ಇದೆ, ಸಂಗೀತ ಕಲಿಕೆಗೆ ಅಂತ್ಯವಿಲ್ಲಾ ಸಂಗೀತ ಜನರ ಜೀವನವನ್ನು ಬೆಳಗಬಲ್ಲದು ಎಂದರು.

ಬಿವಿವಿ ಸಂಘದ ಮುಖ್ಯಸಲಹೆಗಾರರಾದ ಡಾ. ಮೀನಾ ಚಂದಾವರಕರ ಮಾತನಾಡಿದ ಭಾರತದಲ್ಲಿನ ಸಂಗೀತ, ನೃತ್ಯ, ಸಾಹಿತ್ಯ, ಕಲೆ,ಸಮೃದ್ಧಿ ಮತ್ತೆಲ್ಲಿಯೂ ಸಿಗಲಾರದು. ಒಂದು ಕಲೆಗೆ ನೈಪುಣ್ಯತೆ ಬರಬೇಕಾದರೆ ಪ್ರಾಮಾಣಿಕತೆ ಇರಬೇಕು, ಒತ್ತಡಮಯ ಜೀವನದಲ್ಲಿ ಒತ್ತಡವನ್ನು ಕುಗ್ಗಿಸುವ ಸಾಮರ್ಥ್ಯ ಸಂಗೀತದಲ್ಲಿದೆ. ಯಾರು ಮಾಡದಿರುವ ಕಾರ್ಯವನ್ನು ನೀವು ಮಾಡಬೇಕು. ನಿಮ್ಮ ಹಿಂದೆ ಪ್ರಯತ್ನ, ಪರಿಶ್ರಮ ಇರುವುದರಿಂದ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯರಾದ ಎಸ್. ಆರ್. ಮುಗನೂರಮಠ ಮಾತನಾಡಿ ಸಂಗೀತ ಎಲ್ಲರಿಗೂ ಒಲಿಯದು. ಸಂಗೀತ ಕಲಿಯಬೇಕೆನ್ನುವ ಹಸಿವಿರಬೇಕು. ಸಂಗೀತದ ಪರಿಕಲ್ಪನೆಗೆ ಹೊಸ ಅಧ್ಯಾಯ ಪ್ರಾರಂಭವಾಗಿದೆ. ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉತ್ಕೃಷ್ಟ ಕಲಾವಿದರಾಗಿ ಹೊರಹೊಮ್ಮಬೇಕು. ಸ್ಪರ್ಧಾ ಮನೋಭಾವದಿಂದ ಭಾಗವಹಿಸಿ ಎಂದರು.

ಬೊಮ್ಮನಹಳ್ಳಿಯ ವೀರಕ್ತಮಠದ ಪರಮಪೂಜ್ಯರಾದಶಿವಯೋಗಿಸ್ವಾಮಿಗಳು ಉಪಸ್ಥಿತರಿದ್ದರು.

# ಸಸಿ ಬೆಳೆಸಿ ಮನೆ ನಿರ್ಮಿಸಿ: ಪೌರಾಯುಕ್ತ ಈಟಿ

**ಬನಹಟ್ಟಿ :** ಸ್ವಚ್ಛ ಹಾಗು ಸುಂದರ ಪರಿಸರಕ್ಕೆ ಖಾಸಗಿ ಲೇಔಟ್ಗಳಲ್ಲಿ ಮನೆ ನಿರ್ಮಿಸುವ ಮೊದಲು ಸಸಿಗಳನ್ನು ನೆಟ್ಟು ಸುಂದರ ಪರಿಸರವನ್ನಾಗಿಸಿ ಮನೆಗಳನ್ನು ನಿರ್ಮಿಸುವದರಿಂದ ಆರೋಗ್ಯವಂತ ಬದುಕಿಗೆ ಸಹಕಾರಿಯಾಗಲಿದೆ ಎಂದು ಪೌರಾಯುಕ್ತ ಜಗದೀಶ ಈಟಿ ಹೇಳಿದರು.



ನಗರದ ಲಕ್ಷ್ಮಿ ನಗರದ ಖಾಸಗಿ ಲೇಔಟ್ನಲ್ಲಿ ರಸ್ತೆ ಬದಿ ಸರದಿಯಲ್ಲಿ ಸಸಿಗಳನ್ನು ನೆಟ್ಟು ಮಾತನಾಡಿದ ಅವರು, ಹೊಸ ಲೇಔಟ್ಗಳು ನಿರಂತರವಾಗಿ ನಡೆಯುತ್ತಿವೆ. ಅಲ್ಲಲ್ಲಿ ಸಸಿಗಳನ್ನು ನೆಟ್ಟು ಹಸಿರು ಪರಿಸರದ ಜೊತೆಗೆ ಕಾಂಕ್ರೀಟ್ ಪರಿಸರ ನಿರ್ಮಿಸಿ ಎಂದರು.

ಖಾಸಗಿ ಲೇಔಟ್ಗಳಲ್ಲಿ ಉದ್ಯಾನವನಗಳಿಗೆ ಜಾಗೆ ಮೀಸಲಿದ್ದು , ಅವುಗಳ ಸದ್ಬಳಕೆಯನ್ನು ಸುತ್ತಲಿನ ಜನತೆಯಿಂದಾಗಬೇಕು. ಸರ್ಕಾರದಿಂದ ಆಯಾ ಇಲಾಖೆಗಳಿಂದ ನಿರ್ವಹಣೆಯಾಗುತ್ತಿರುವ ಉದ್ಯಾನವನಗಳಿಗೆ ಪೂರಕವಾಗಿ ಜನತೆ ಸ್ಪಂದಿಸಿದ್ದಲ್ಲಿ ಸುತ್ತಲಿನ ಜನತೆಗೆ ಅನುಕೂಲವಾಗುವದು. ಪ್ರತಿಯೊಬ್ಬರೂ ಹಸಿರು ಪರಿಸರಕ್ಕೆ ಪ್ರಾಧಾನ್ಯತೆ ನೀಡುವ ಮೂಲಕ ಮಾನವೀಯ ಗುಣಗಳಿಗೆ ಸ್ಪಂದಿಸುವಂತಾಗ ಬೇಕೆಂದರು.

ಇರ್ಷಾದ ಮೋಮಿನ್, ರಾಜು ಸಿದ್ದಪ್ಪಗೋಳ, ರಮೇಶ ಸೋನೋನೆ, ಆದಿಲ್ಬಾಷಾ ಮಳಲಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State